ಕೊರವಂಜಿ



Koravanji

ಆಗಸ್ಟ್

೧೯೬೨

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಬಚ್ಚು

ಶ್ರೀ|| ರಾಮಿ

ಶ್ರೀ|| ಕೇಫ

ಶ್ರೀ|| ಪ್ರಸಾದ್

ಶ್ರೀ|| ಅ ರಾ ಸೇ.


ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ ಕೇವಲ ನಾಲ್ಕಾಣೆ

ತಿಳಿನಗೆಯ ಮಾಸಪತ್ರಿಕೆ


ಈ ತಿಂಗಳಲ್ಲೇ ಪ್ರದರ್ಶನ
ಸರ್ವೋದಯ ಚಿತ್ರ
ಮಹಾತ್ಮ
ಕಬೀರ್
ಕನ್ನಡ
ನಿರ್ದೇಶನ...
ಪಿ. ಶ್ರೀನಿವಾಸ್
ನಿರ್ಮಾತೃ...
ಟಿ.ಎನ್.ರೆಡ್ಡಿ
PARTHAN
KATAKA



ಸಂಪುಟ ೨೧ ಆಗಸ್ಟ್ ೧೯೬೨ ಸಂಚಿಕೆ ೫

★ ಕುಹಕಿಡಿಗಳು ★

ನಮ್ಮೂರಿನ ಮಂತ್ರಿಮಂಡಲದ ಅವಾಂತರದ ರೀತೀನೇ ಇಂಗ್ಲೆಂಡಿನಲ್ಲಿ ಕೂಡ ಆಗಿರೋದನ್ನ ನೋಡಿದರೆ.

---ನಮ್ಮಿಂದ ಇಂಗ್ಲೆಂಡಿನವರು ಈಗೀಗ ಕಲಿಯಲಿಕ್ಕೆ ಶುರು ಮಾಡಿದ್ದಾರೆ ಅನ್ನಬಹುದು. ಅಲ್ಲವೇ?

* * * *

ಶ್ರೀಮಂತರೆಲ್ಲಾ ನಾಯಿಗಳನ್ನು ಯಾತಕ್ಕೆ ಅಷ್ಟು ಪ್ರೀತಿಯಿಂದ ಸಾಕುತ್ತಾರೆ? (ಪ್ರಶ್ನೆ)

—ಗಾದೆ ಕೇಳಿಲ್ಲವೆ? ಅದಕ್ಕೇನೆ—ಶ್ರೀಮಂತರು ಸಾಕೋ ನಾಯಿಗಳು ಸುಮ್ಮನೆ ಬೊಗಳುತ್ತೆ. ಕಚ್ಚಲ್ಲ. ಆದರೆ ಶ್ರೀಮಂತರ ಹೆಂಡತಿಯರು ಕಚ್ಚು ತ್ತಾರೆ ಬೊಗಳುಲ್ಲ. ಅದಕ್ಕೇ.

* * * *

ಈ ಸಾರಿ ನವರಾತ್ರಿಯಲ್ಲಿ ಪಾಂಡಿಚೆರಿ ಬೊಂಬೆಗಳನ್ನು ಗೋವಾದಲ್ಲಿ ಮಾರುತ್ತಾರಂತೆ.

* * * *

ತೆರಿಗೆಯ ಭಾರ ತಲೆಯಮೇಲೆ ಅತ್ಯಧಿಕವಾಗಿದೆ. ಎಂದೊಬ್ಬರು ಅಳುತ್ತಾರೆ.

—ಅದಕ್ಕೇ ತಲೆಗೆ ರುಮಾಲು ಹಾಕೋದನ್ನು ಬಿಟ್ಟು, ಹಗೂರಾದ ಬಿಳಿ ಟೋಪಿ ಧರಿಸಿ, ಆಗ ತೆರಿಗೆಯ ಭಾರ ಕಡಿಮೆಯಾದೀತು ಎಂದೊಬ್ಬರು ಸಮಜಾ ಯಿಷಿ ಮಾಡುತ್ತಾರೆ.

* * * *

ಪಾನನಿರೋಧ ಮಾಡಬೇಕು ಎಂದು ಕಾಂಗ್ರೆಸಿನವರು ಹಾರಾಡ್ತಾ ಇರೋದರ ಕಾರಣ ಈಗ ತಿಳಿಯಿತು.

—ಏನೂ ಕುಡಿಯದೆ ನಮಗೆ ಅಮಲೇರಿದೆ. ನಮ್ಮ ಹಾಗೆ ಎಲ್ಲರೂ ಕುಡಿಯದೇನೇ ಕುಡಿದವರ ಹಾಗೆ ಹಾರಾಡಬಾರದೆ ಎನ್ನುವುದೇ ಕಾರಣ.

* * * *

ಮೂರು ವರ್ಷಗಳಲ್ಲಿ, ಒಂಭತ್ತು ಪೋಲೀಸ್ ನಾಯಿಗಳಿಗೆ ಸುಮಾರು ೮೧ ಸಾವಿರ ರೂಪಾಯಿಗಳು ಖರ್ಚಾಗ್ತಯ್ತಂತೆ.

—ಅಬ್ಬಾ! ಸಾಕಬೇಕಾದರೆ ಅಳಿಯಂದಿರಿಗಿಂತ ಪೋಲೀಸ್ ನಾಯಿಗಳೇ ದುಬಾರಿ.

* * * *

ಯೂರೋಪಿನಲ್ಲಿ ಭಿಕ್ಷಾಟನೆಗೆ ಹೋದಲ್ಲೆಲ್ಲಾ ಮೊರಾರ್ಜಿಯವರಿಗೆ ಅನುಕಂಪದ ಸ್ವಾಗತ ದೊರೆಯಿತಂತೆ.

—ಗಾಣಿಗಿತ್ತಿ ಅಯ್ಯೋ ಅಂದರೆ.... ಬುತ್ತಿ ಜಿಡ್ಡಾಗುತ್ತ್ಯೇ? ಆಗುತ್ತೆ.

* * * *

ಅರ್ಥಸಚಿವರ ಯೂರೋಪು ಪ್ರವಾಸವು ತುಂಬಾ ಅರ್ಥಪೂರ್ಣವಾಗಿದೆ ಎಂದು ಪ್ರಧಾನಿಯವರು ಅರ್ಥವತ್ತಾಗಿ ನುಡಿದಿದ್ದಾರೆ.

* * * *

ಚೀಣೀಯರ ಸ್ನಾನದಿಂದಾಗಿ ಬ್ರಹ್ಮಾಪುತ್ರಾ ನದಿಯ ಬಣ್ಣವು ಹಳದಿಯಾಗಿದೆ ಎಂದೆನ್ನುವುದು ಖಚಿತವಲ್ಲವಂತೆ.

* * * *

ಗೇರ್‌ವಾಲ್ ಕಣಿವೆಯಲ್ಲಿ ಚೀಣಿ ಸೈನಿಕರು, ನಮ್ಮ ಶಿಬಿರದ ಸುತ್ತ ಯಕ್ಷಗಾನ ಹಾಡುತ್ತಾ ಹಿಂದಕ್ಕೆ ಮುಂದಕ್ಕೆ ನಾಚ್ ಮಾಡುತ್ತಿದ್ದಾರಂತೆ.

* * * *

ನೇಪಾಳದ ಅತ್ತಕಡೆ ಚೀಣಿಯರು ಹೆದ್ದಾರಿ ಹಾಕಿದರಂತೆ.

—ಇತ್ತಕಡೆ ನಾವು ಹೆದ್ದಾರಿಯನ್ನು ಬಲುಬೇಗ ಹಾಕಿದ್ದೇವೆ.

(ಪಕ್ಕ ಅಕ್ಕದ ಸುದ್ದಿಗಳು)

* * * *

ಆಕಾಶವಾಣಿಯು ಇನ್ನುಮುಂದೆ ಹಾರ್ಮೋನಿಯಂಮೇಲಿನ ಪ್ರತಿಬಂಧಕವನ್ನು ತೆಗೆಯುವ ಆಲೋಚನೆ ಮಾಡುತ್ತದೆ.

(ಸಚಿವರ ಹೇಳಿಕೆ)

—ಅಂದರೆ ಥಂಡಿಸಮರ, ಬಿಸಿಯುದ್ಧವಾಗಬಹುದು!!

ಅಪರ್ಥೈಟ್

ದಕ್ಷಿಣದ ಆಫ್ರಿಕಾದಲ್ಲಿ ಕರಿಯರನ್ನು ಬೇರೆ ಇರಿಸುವ ನೀತಿರೀತಿಯನ್ನು ಅಪರ್ಥೈಟ್ ಎಂದು [Apar-theit] ನಾಮಕರಣ ಮಾಡಿದ್ದಾರೆ. ಅದರ ವಿಷಯ ನಾನು ಹೇಳುತ್ತಿರೋದು.

ಮಡಿ ಉಟ್ಟುಕೊಂಡು, ಮುಗುಟ ಹೊದ್ದುಕೊಂಡು, ಸಂಪ್ರೋಕ್ಷಣೆ ಮಾಡಿದ ಬೀಡೀನ ಪುರೋಹಿತರು ದೇವರಮನೆ ಬಾಗಿಲಹಿಂದೆ ಮಡಿಯಲ್ಲಿ ಸೇದುಲ್ಲವೇ? ಹಾಗೆಯೇ ಆಫ್ರಿಕಾದಲ್ಲಿ ಕೂಡ ಅಪರ್ಥೈಟ್ ಪ್ರಯೋಗದಲ್ಲಿ ಹಲವಾರು "ರಸ ವಿಷಯ"ಗಳು ನಡೆದುಹೋಗಿವೆ. ಉದಾಹರಣೆಗೆ ಎರಡು ವಿಷಯಗಳನ್ನು ಹೇಳುತ್ತೀನೆ. ಬೇರೆ ಕೆಲಸವಿಲ್ಲದಿದ್ದರೆ ಮುಂದೆ ಓದಿ.

ದಕ್ಷಿಣ ಆಫ್ರಿಕಾದ ಲೋಕಸಭೆಯಲ್ಲಿ ಮಾನ್ಯ ಸದಸ್ಯರೊಬ್ಬರು ಬಿಸಿ ಬಿಸಿ ಭಾಷಣ ಮಾಡುತ್ತಾ „ ಸಮುದ್ರತೀರದಲ್ಲಿ ಬಿಳಿಯರಿಗೆ ಬೇರೆ ಸ್ನಾನಘಟ್ಟ ಕರಿಯರಿಗೆ ಬೇರೆ ಅಂತ ನಿಗದಿ ಮಾಡಿದ್ದೀರಿ. ದಿಟ. ಆದರೆ ಸಮುದ್ರವು ಉಬ್ಬರವಿಳಿತಗಳಿಗೆ ಒಳಗಾಗಿದೆ. ಹಾಗಾಗಿ ಕರಿಯರಪಾಲಿನ ಸಮುದ್ರ ಎರಡು ಫರ್ಲಾಂಗ್ ಇಳಿದು ಹೋಗಿ ಅವರಿಗೆ ಹೆಚ್ಚು ಸಮುದ್ರದಂಚು ಸಿಕ್ಕಿದೆ. ಆದರೆ ಬಿಳಿಯರ ಭಾಗದಲ್ಲಿ ಒಂದೇ ಫರ್ಲಾಂಗ್ ಇಳಿಯುವುದರಿಂದ ನಮ್ಮ ಪಾಲಿನ ಸಮುದ್ರದಂಚು ಕಡಿಮೆಯಾಗಿದೆ. ಇದಕ್ಕೆ ಏನು ಪರಿಹಾರ ಏರ್ಪಾಡುಮಾಡುತ್ತೀರಿ" ಎಂದು ಘಂಟಾಘೋಷವಾಗಿ ಕೇಳಿದ.

ಹೌದಲ್ಲಾ! ಎಂದು ಬಲು ಜನ ಬಿಳಿಯರು ಹಲ್ಲು ಹಲ್ಲು ಕಡಿದರು. ಆಗ ಸರ್ಕಾರದವರು ಅಭಯವಚನವಿತ್ತರು. "ಕರಿಯರ ಸಮುದ್ರದ ಅಂಚಿನಿಂದ ಎರಡುಮೈಲಿದೂರ ದಡವನ್ನು ಬಹಿಷ್ಕಾರ ಪ್ರದೇಶ ಅಂತ ಹುಕುಂ ಹೊರಡಿಸುತ್ತೀವೆ. ಅಂದಮೇಲೆ ಕರಿಯರು ಸಮುದ್ರವನ್ನು ಎರಡು ಮೈಲಿದೂರದಿಂದಲೇ ಅನುಭವಿಸಬೇಕು." ಎನ್ನುವ ಹುಕುಂ ಹೊರಡಿಸುತ್ತೀವೆ ಎಂದು.

ಚಪ್ಪಳೆಗಳ ಸುರಿಮಳೆ ಬಿತ್ತು.

ಚಪ್ಪಳೆಯ ಸುರಿಮಳೆ ನಿಂತಮೇಲೆ ಮತ್ತೊಬ್ಬ ಬಿಳಿ ಸದಸ್ಯ ಎದ್ದುನಿಂತು "ಕಾರ್ಯವಾಸಿಯಾಗಿ ನಾವು ಕರಿಯರನ್ನು ಭೇಟಿಮಾಡಬೇಕಾಗುತ್ತೆ. ಆಗ ನಾವು ಸ್ವಾಗತಿಸುವ ಸೂಚನೆಯಾಗಿ ಅವರ ಕೈ ಕುಲುಕಬೇಕು. ಆ ಛಮ್ಮವನ್ನು ನಮ್ಮ ಕೈಗೆ ಸೋಂಕಿಸಿದರೆ, ನಮ್ಮ ಬ್ರಹ್ಮಚರ್ಯ ಹಾಳಾದಂತೆಯೇ! ಅದಕ್ಕೇ ನಾನೊಂದು

ಸಲಹೆ ಮಾಡುತ್ತೇನೆ ಆಫ್ರಿಕನ್ನರ ಅನಾದಿಯಾದ ಸ್ವಾಗತದ ರೀತಿ ಕೈ ಎತ್ತಿ ಕ್ಷೇಮವೇ ಎಂದು ದೂರದಿಂದಲೇ ಎಂದು ಕೇಳುವುದು. ಆಫ್ರಿಕನ್ನರ ಸ್ವಾಗತ ರೀತಿಯನ್ನೇ ನಾವು ಸರ್ಕಾರದ ಪರವಾಗಿ ಅನುಮೋದಿಸೋಣ ಆಗ ಅವರಿಗೂ ಖುಷಿಯಾಗುತ್ತೆ. ಅವರನ್ನು ಮುಟ್ಟುವ ಗೋಳೂ ನಮಗಿರುಲ್ಲ ಹೇಳಿದನು.

ಬಿಸಿಬಿಳಿಯ ಸದಸ್ಯರೆಲ್ಲರೂ ವಹವ್ವಾ ವಹವ್ವಾ, ಭೇಷ್, ಭೇಷ್ ಬಲು ಚೆಂದ, ಬಲ್ಸೊಗಸು ಎನ್ನುವ ರೀತಿಯಲ್ಲಿ ಚಪ್ಪಳೆಯ ಚಪ್ಪರವನ್ನೇ ಸಭೆಗೆ ಹೊದಿಸಿದರು.

ಬಿಳಿಯ ಕುರಿಗಳ ಲೋಕ ಮಂದೆಯಲ್ಲಿ. ಬಿಳಿಯ ಟಗರೊಂದು ಸದಸ್ಯನಾಗಿ ಕುಳಿತಿತ್ತು. ಅದು ವಿರೋಧ ಪಕ್ಷದ ನಾಯಕನಾಗಿತ್ತು. ಅದಕ್ಕೆ ಇದ್ದ ಸದಸ್ಯ ಬೆಂಬಲ ಮೂರು. ಮತ್ತೊಂದು ಅವನೇ! ಅವನಿಗೆ ಆಫ್ರಿಕದ ಕರಿಯ ಜನರು ಮಾನವರು, ಎಂದು ಅನಿಸಿತ್ತು. ಅದಕ್ಕೆ ವಿರೋಧ ಪಕ್ಷವನ್ನು ಶುರುಮಾಡಿದ್ದನವ.

ಈ ಸಲಹೆಯನ್ನು ಕೇಳಿದಕೂಡಲೆ ಈ ಟಗರಿಗೆ ಬಲು ಖುಷಿಯಾಯ್ತು. ಎದ್ದು ನಿಂತ.

ವಿರೋಧ ಪಕ್ಷದ ನಾಯಕಟಗರು ಎದ್ದುನಿಂತಾಗ ಮಿಕ್ಕ ಬಿಳಿಯ ಕುರಿಗಳು ತಲೆ ಎತ್ತಿ, ದನಿ ತಗ್ಗಿಸಿದುವು.

ಆಗ ಟಗರು ಹೇಳಿತು " ಭೇಷ್ ! ನನ್ನ ಮಾನ್ಯ ಸೋದರ ಕುರಿಇತ್ತ ಸಲಹೆಯನ್ನು ಕೇಳಿ ಬಲು ಸಂತೋಷವಾಯ್ತು ಈ ಸಲಹೆಯನ್ನು ಸರ್ಕಾರವು ಒಪ್ಪಿಕೊಂಡು ಆರೀತಿಯಾಗಿ ಆಫ್ರಿಕನ್ನರ ಅನಾದಿಯಾಗಿಬಂದ ಸ್ವಾಗತವನ್ನೇ ಎಲ್ಲರೂ ಮಾಡಬೇಕು ಎಂದು ಶಾಸನ ಮಾಡಿದರೆ, ನನಗೆ, ನನ್ನ ಪಕ್ಷಕ್ಕೆ ಬಲು ಸಹಾಯವಾದೀತು. ಈ ಸಲಹೆಗೆ ನಮ್ಮ ಪಕ್ಷದ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿ ಟಗರು ಕುಳಿತುಕೊಂಡಿತು.

ಸರ್ಕಾರದ ಪ್ರಧಾನ ಸಚಿವರಿಗೆ ಇದರಲ್ಲಿ ಏನೋ ಕುಂದು ಇದೆ. ಅದಕ್ಕೇ ವಿರೋಧ ಪಕ್ಷದ ಟಗರು ನಮಗೆ ಬೆಂಬಲ ನೀಡುತ್ತಿದೆ. ಇದರ ಮರ್ಮ ತಿಳಿದುಕೊಳ್ಳಬೇಕು. ಶಾಸನ ಮಾಡುವ ಮೊದಲು ಎಂದು ಅನ್ನಿಸಿತು.

" ಮಾನ್ಯ ಟಗರಿಗೆ ಅಭಿವಂದನೆಗಳು. ಆಫ್ರಿಕನ್ನರ ಸ್ವಾಗತರೀತಿಯ ಪೂರ್ಣ ವಿವರಗಳು ಅವರಿಗೆ ತಿಳಿದಂತೆ ಮತ್ತಾರಿಗೂ ತಿಳಿದಿಲ್ಲ. ವಿರೋಧ ಪಕ್ಷದ ಮಾನ್ಯನಾಯಕರು ವಿವರಣೆಯನ್ನು ಕೊಡುವಂತೆ ಪ್ರಾರ್ಥಿಸುತ್ತೇನೆ" ಎಂದು ಅರಿವಿನಯದಿಂದ ಕೇಳಿದರು.

ವಿನಯದ ಈ ಮಾತಿಗೆ ಟಗರು ಕೊಂಬುಗಳನ್ನು ಆಡಿಸಿತು. ಆಡಿಸುತ್ತಾ ಎದ್ದುನಿಂತು.

" ಅನಾದಿಯಾಗಿ ಆಫ್ರಿಕನ್ನರ ಸ್ವಾಗತದ ರೀತಿ ಹೀಗೆ ಗಂಡಸರು ಗಂಡಸರನ್ನು ಭೇಟಿಯಾದಾಗ, ಹಸ್ತವನ್ನೆತ್ತಿಹಿಡಿದು ಕ್ಷೇಮವೇ ಎಂದು ದೂರದಿಂದಲೇ ಕೇಳುವದು.

ಆದರೆ ಗಂಡಸರನ್ನು ಹೆಂಗಸರು ಭೆಟ್ಟಿಯಾದಾಗ, ಹೆಂಗಸರು ತಲೆಬಾಗಿಸಿ ಸೊಂಟ ತಗ್ಗಿಸಿ ಗಂಡಸಿನ ಎರಡೂ ಪಾದಗಳಿಗೆ ಮುತ್ತು ಕೊಡುವುದು.

“ಆಫ್ರಿಕನ್ನರ ಅನಾದಿಯ ರೀತಿಯೇ ಶಾಸನವಾಗಲಿ” ಎಂದು ಹೇಳಿತು. ಬಿಳಿಯ ಕುರಿಗಳ, ಸೋದರಿಯರು, ಹೆಂಡತಿಯರು ಈ ರೀತಿ ಕರಿಯ ಆಫ್ರಿಕದ ಗಂಡಸರನ್ನು ಸ್ವಾಗತಿಸುವ ಕನಸನ್ನು ಕಾಣುತ್ತ ಟಗರು ತನ್ನ ಗಡ್ಡ ಕುಣಿಸಿತು.

* * * *

ಮಾನ್ಯ ಬಿಳಿ ಕುರಿಯ ಸಲಹೆಯು ಶಾಸನವಾಗಲಿಲ್ಲ ಎಂದು ಹೇಳಬೇಕೇ?

—ಬಚ್ಚ



ನೆಹ್ರೂ ಅವರಿಗೆ ಕಾಯಿಲೆ ಇಲ್ಲ ದಿಟವಾಗಲೂ ಅಂಥ ಕಾಯಿಲೆ ಏನೂ ಇಲ್ಲ–ಅಂತ ದಿನಾಗಲೂ ಪೇಪರಿನಲ್ಲಿ ಬರ್ತಿದೇಪ್ಪಾ!

೧೯೬೨ರ

ಸ್ವರ್ಗ ಸುಂದರಿ

ನಮ್ಮೂರಿನ ಕಂಟೋನ್ಮೆಂಟ್ ಕ್ಲಬ್ಬುಗಳಲ್ಲಿ ವರ್ಷಕ್ಕೊಂದು ರಾತ್ರಿ ಸ್ಪರ್ಧೆ ಏರ್ಪಡಿಸುತ್ತಾರೆ. ತಿಳಿದಿರಬಹುದು ನಿಮಗೆ. ಮದುವೆಯಾಗದೆ ಇರುವ ತರುಣಿಯರು, ಮದುವೆಯಾಗಿದ್ದರೂ ಬೇಜಾರಾಗಿ ಹೊಸ ಅವಕಾಶ ಸಿಗುತ್ತೆಯೇ ಎಂದು ಆಸೆ ಹೊಂದಿರುವ ಹರಿಣಿಯರು, ಇವರೆಲ್ಲರೂ ಈ ಸ್ಪರ್ಧೆಯಲ್ಲಿ ಭಾಗ ವಹಿಸುತ್ತಾರೆ. ಯಾರು ತುಂಬಾ ರೂಪರಾಶಿ ಹೊಂದಿದ್ದಾರೆ ಎಂದು ತೀರ್ಪುಗೊಡಲು ಮೂರು ಜನರ ಸಮಿತಿಯೊಂದಿರುತ್ತೆ. ಸ್ಪರ್ಧೆಯಲ್ಲಿ ಗೆದ್ದವರನ್ನು "ಕಂಟೋನ್ಮೆಂಟ್ ಸುಂದರಿ" ಎಂದು ಅಭಿನಂದಿಸಿ, ಅವಳ ಚಿತ್ರವನ್ನು ಪತ್ರಿಕೆಗಳಲ್ಲೆಲ್ಲಾ ಹಾಕುತ್ತಾರೆ. ಸ್ಪರ್ಧಿಗಳು ರೂಪರಾಶಿಯನ್ನು ತೋರಿಸಲು ಹಲವಾರು ವಿಧಾನಗಳನ್ನು ಕೆಲವಾರು ಭಂಗಿಗಳನ್ನು ಒಮ್ಮೊಮ್ಮೆ ತಗಲೂಫಿಯನ್ನೂ ಆಚರಿಸುವುದು ಸ್ವಾಭಾವಿಕ.

ಇದೇ ರೀತಿ ನೋಡಿ ಸ್ವರ್ಗದಲ್ಲಿ ಕೂಡ ಚೈತ್ರ ಶುದ್ಧ ಪೌರ್ಣಮಿಯ ರಾತ್ರಿ ಬೆಳದಿಂಗಳಿನಲ್ಲಿ ಪಾರಿಜಾತದ ಮರದ ಕೆಳಗೆ; ಆ ವರ್ಷದ "ಸ್ವರ್ಗ ಸುಂದರಿ" ಯನ್ನು ಆಯ್ಕೆಮಾಡಲು, ಸಂತೋಷಕೂಟವೊಂದು ಸೇರುತ್ತದೆ. ಆದರೆ ಸ್ವರ್ಗದಲ್ಲಿ ಸ್ಪರ್ಧೆಗೆ ನಿಂತವರು, ಪ್ರವೇಶ ಧನ ಕೊಡಬೇಕು ನಮ್ಮೂರಿನ ಹಾಗೆ ತೊಡೆತಟ್ಟಿ, ಸ್ಪರ್ಧೆಗೆ ಪುಕಟ್ಟು ನಿಲ್ಲುವಂತಿಲ್ಲ. ಆದರೂ ಸಂತೋಷಕೂಟಕ್ಕೆ ಬಂದವರು ನಮ್ಮೂರಿನಲ್ಲಿದ್ದ ಹಾಗೆ ಪ್ರವೇಶಧನ ಕೊಡಬೇಕಾಗಿಲ್ಲ. ಅದರ ಬದಲು ಬಂದವರೆಲ್ಲರೂ ತಮ್ಮ "ಮತ"ಗಳನ್ನು ತಾವು ಮೆಚ್ಚಿದ ಅಭ್ಯರ್ಥಿಗೆ ಕೊಡಲೇಬೇಕು. ಆದರೂ ಕೂಡಿದ ಪಾನೀಯಗಳಿಗೆ ಕಾಣಿಕೆ ತೆರಬೇಕು. ಹೆಚ್ಚು ಮತಗಳಿಸಿದ ಸುಂದರಿಯ ತಲೆಯಮೇಲೆ, ನಮ್ಮ ಆಸ್ಪತ್ರೆಯ ಲಂಗದ ನರ್ಸುಗಳು ತಲೆ ಟೊಪ್ಪಿ ಹಾಕಿ ಕೊಳ್ಳುಲ್ಲವೇ ಆ ರೀತಿ ಪಾರಿಜಾತದ ಹೂವಿನ ಅಡ್ಡ ಕಿರೀಟವೊಂದನ್ನು ದೇವೇಂದ್ರನು ಇರಿಸುತ್ತಾನೆ. ನಾಲ್ವರು ಗಂಧರ್ವರು, ಹೆಗಲಮೇಲೆ ಆಕೆಯನ್ನು ಹೊತ್ತುಕೊಂಡು, ಬೆಳದಿಂಗಳ ಮೆರವಣಿಗೆ ಮಾಡುತ್ತಾರೆ ಅಂದಿನಿಂದ ಒಂದು ವರ್ಷ ಆಕೆ ಸ್ವರ್ಗಸುಂದರಿ. ಇಡೀ ವರ್ಷ ಅವಳು ದೇವರಿಗೆ ಬಿಟ್ಟ ದಾಸಿಯಂತೆ ಏನೆಲ್ಲಾ ಆಡಬಹುದು. ಕಂಡಲ್ಲೆಲ್ಲಾ ಹೋಗಬಹುದು. ಕಂಡವರ ಕೊರಳಿಗೆ ನೇಣಾಗಬಹುದು.

ಮುಖ್ಯ ಆ ವರ್ಷ ಬಾರಾಖೂನ್ ಮಾಫ್ ಅವಳಿಗೆ.

* * * *

ಸ್ವರ್ಗದಲ್ಲಿ ೧೯೬೨ ರ ಸ್ಪರ್ಧೆ ಸ್ವಲ್ಪ ಬಿರುಸಾಗಿತ್ತು. ಸೋಮರಸದ ಫ್ಯಾಕ್ಟರಿಯ ಮಾಲೀಕನಿಗೆ ಬೆಳೆದ ಮಗಳ ಯೋಚನೆಯೇ ತಲೆಯತುಂಬ ತುಂಬಿತ್ತು. ಯಾಕಂದರೆ ಏನುಕಾರಣವೋ ಏನೋ ಆಕೆಯ ಮುಖ ಕುದುರೆ ಮುಖದಂತಿತ್ತು. ಅಂದ ಮಾತ್ರಕ್ಕೆ ಕಿನ್ನರ ಕಿಂಪುರುಷರ ತರಹಾ ಅಲ್ಲ. ಆ ಛಾಯೆ ಮಾತ್ರ ಇತ್ತು. ಆ ದೇಹ ಮಾತ್ರ ಇತ್ತಿಲ್ಲ. ಸ್ವರ್ಗದಲ್ಲಿರುವ ಹುಡುಗರು ಸ್ವರ್ಗಸುಖ ಬಯಸುವವರು ಈಕೇನ ದೂರದಿಂದಲೇ ಕಂಡು, ಅಡ್ಡಬೀದಿ ಹಿಡಿದು ಮುಖ ತಪ್ಪಿಸಿಕೊಳ್ಳುತ್ತಿದ್ದರು. ಅದಕ್ಕೇ ಅಪ್ಪನಿಗೆ " ಕೂಟಕ್ಕೆ ಬಂದವರಿಗೆಲ್ಲಾ ಸಾಕಷ್ಟು ಲಂಚ ಕುಡಿಸಿ ಬಹುಮತಗಳಿಸಿ ಮಗಳನ್ನು ಸ್ವರ್ಗಸುಂದರಿ ಎನಿಸಿದರೆ ತನ್ನ ಜವಾಬ್ದಾರಿ ತೀರಿದ ಹಾಗಾಯ್ತು " ಎಂಬ ಆಸೆ. ಅದಕ್ಕೆಲ್ಲಾ ಏರ್ಪಾಡನ್ನು ಮಾಡಿದ್ದ.

ಊರ್ವಶಿಯ ಗರುಡಿ ಮನೆಗೆ ಮೂರು ತಿಂಗಳಿಂದ ಕಳಿಸಿ, ಬಳುಕುವುದು, ಕೊಂಕುವುದು, ಉಂಗುಷ್ಟದಿಂದ ಗುಂಡಿ ತೋಡುವುದು, ಹಣೆಯಮೇಲೆ ಸುರುಳಿ ಕೂದಲ ಗೊಂಚಲನ್ನು ಕುಣಿಸುವುದು ಇತ್ಯಾದಿಯೆಲ್ಲವನ್ನು ಕಲಿಸಿದ್ದ. ಸ್ಪರ್ಧೆಯ ಪೌರ್ಣಮಿಯ ರಾತ್ರಿ ತನ್ನ ಹೆಸರು ಕೆತ್ತಿದ ದೊನ್ನೆಗಳಲ್ಲಿ ಪಾನೀಯವನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿದ್ದ.

ಆ ದಿನಕ್ಕೆ ಸ್ಪೆಷಲ್ ಘರಮಾಘರಂ ಸೋಮರಸವನ್ನು ಭಟ್ಟಿ ಇಳಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದ. ಫ್ಯಾಕ್ಟರಿ ಕಾರ್ಯವಾಹನಿಗೆ " ದುಡ್ಡಿನ ಮುಖ ನೋಡಬೇಡ ! ಮಾಲಿನ ಅಮಲು ಮಜಭೂತಾಗಿರಬೇಕು ಸುಲಭದಲ್ಲಿ ನಮ್ಮನ್ನ ಮರೆಯಬಾರದು " ಎಂದು ಹೇಳಿದ್ದೂ ಆಗಿತ್ತು.

*   *   *   *

ಆದರೆ ೧೯೬೧ರಲ್ಲಿ ನಮ್ಮೂರಿನ ಮಿಟಿಕಲಾಡಿ ಮೀನಾಕ್ಷಿ ತುಂಬುಪ್ರಾಯದಲ್ಲಿ ಆಟೋರಿಕ್ಷಾ ಅಪಘಾತವನ್ನು ಅನುಭವಿಸಿ ಸ್ವರ್ಗಸ್ಥಳಾಗಿದ್ದಳು. ಅಲ್ಲಿನ ಆಚಾರ ವಿಚಾರವನ್ನು ತಿಳಿದುಕೊಂಡು ಚೈತ್ರಮಾಸದ ಸ್ಪರ್ಧೆಗೆ ನಿಲ್ಲಬೇಕು ಅಂತ ತೀರ್ಮಾನಿಸಿದ್ದಳು. ' ಮತ 'ಗಳಿಸಿ ವಿಜಯಗಳಿಸಬೇಕಾದ ಏರ್ಪಾಡು ಆಕೆಗೆ ಅಪ್ಯಾಯಮಾನವಾಗಿತ್ತು. ಭೂಲೋಕದಲ್ಲಿದ್ದಾಗ ಇದರ ಅನುಭವ ಬೇಕಾದಷ್ಟು ಬಂದಿತ್ತು. ಆಲೋಚನೆಮಾಡಿದಳು. ವಿಜಯಗಳಿಸುವ ಯಾತ್ರೆಯ ವಿವರಗಳನ್ನೆಲ್ಲಾ ಸಿದ್ಧಪಡಿಸಿದಳು.

ಹೆಚ್ಚು ಶೃಂಗಾರಮಾಡಿಕೊಳ್ಳಲಿಲ್ಲ. ಆಧಾರದ ತೊಡಿಗೆಗಳನ್ನು ಹಗೂರಾಗಿ ಎತ್ತಿಕಟ್ಟಿದಳು. ಪಾರಿಜಾತ ಪುನುಗು, ಜವ್ವಾಜಿ ಒಂದನ್ನೂ ಬಳಸಲಿಲ್ಲ. ಮತ್ಸ್ಯಗಂಧಿಯಂತೆ ಸ್ಪರ್ಧೆಗಳ ಹಸೆಮಂಟಪದಮೇಲೆ ಅಡ್ಡಾಡುವ ರೀತಿ, ಜನರ ಮಧ್ಯ ಸುಳಿದು ಕಡೆಗೆ ಅಧ್ಯಕ್ಷರ ಹತ್ತಿರ ಹೋಗಿ ಅಭಿವಂದಿಸುವ ಠೀವಿ ಎಲ್ಲವನ್ನು ಅಭ್ಯಾಸ ಮಾಡಿದಳು.

ರಾತ್ರಿ ಸ್ಪರ್ಧೆಯಕೂಟವು ಎಂಟರ ಹೊತ್ತಿಗೆ ಸೇರಿತು. ಒಂಭತ್ತರ ಹೊತ್ತಿಗೆ ಜನರೆಲ್ಲರೂ ದೊನ್ಣೆಯ ಮೇಲಿನ ಹೆಸರನ್ನು ಹೇಳಿ ಚಪ್ಪರಿಸುತ್ತಾ ಸ್ಪರ್ಧಾ ಮಂಟಪದ ಮೇಲಿದ್ದ ಅಭ್ಯರ್ಥಿಯನ್ನು ಕಂಡು "ತುಂಟ ಕುದುರಿ ಹಂಗ ಬೆಳದ ಈಕಿ ಯಾರೋ, ಬಲುಚೆಂದ ಕಾಣ್ತಾಳಿ" ಎಂದು ಹೇಳಿಕೊಂಡರು.

ಆ ಹೊತ್ತಿಗೆ ಸ್ಪರ್ಧಾಮಂಟಪದ ಮೇಲಿದ್ದ ಮಿಟುಕಲಾಡಿ ಮೆಲ್ಲಗೆ ಇಳಿದು ಬಂದಳು ಸುತ್ತಲೂ ಕುಳಿತಿದ್ದ ಜನರ ಮಧ್ಯೆ ಬಳುಕುತ್ತ ನಡೆದು ಹೋದಳು. ಹೋಗುವಾಗ ಕಣ್ಣಂಬು ತಾಕಿಸಿ ಹೋದಳು. ಸೋಮರಸದ ಘರವು ಹುಳಿ ವಾಸನೆಯನ್ನು ಮೆಟ್ಟಿನಿಂತ ಈಕೆಯ ಸಹಜ ಪರಿಮಳವು ಗಾಳಿಯಲ್ಲೇ ಹೆಪ್ಪಿಟ್ಟಂತೆ ಹಗೂರಾಗಿ ಅಲ್ಲೆಲ್ಲಾ ಹರಡಿತು.

ಅಧ್ಯಕ್ಷತೆ ವಹಿಸಿದ್ದ ದೇವೇಂದ್ರನ ಉಯ್ಯಾಲೆ ಕುರ್ಚಿಯ ಬಳಿಗೆ ಹೋಗಿ ಅರೆಬಾಗಿನಿಂತು ಅಭಿವಂದಿಸಿದಳು.

ದೇವೇಂದ್ರನ ತೆರೆದ ಬಾಯಿಯಲ್ಲಿ ನೀರೂರಿತು.

* * * *

ರಾತ್ರಿ ಹನ್ನೆರಡು ತಾಸು ಆಯಿತು. ವಂದಿಮಾಗಧರು ಜಾಗಟೆ ಬಾರಿಸಿದರು, ಸ್ಪರ್ಧಿಗಳಲ್ಲಿ ಗೆಜ್ಜೆಕಟ್ಟಿದ್ದವರೆಲ್ಲಾ ಕುಣಿದಾಡಿದರು. ನಮ್ಮೂರಿನ ಚುನಾವಣಾ ನಡೆಯುವಾಗ ಏನೇನು ಅವಾಂತರ ಆಗುತ್ತೆ ಅವೆಲ್ಲವೂ ನಡೆದುಹೋಯಿತು.

"ಅಭಿಮತ ಕೊಡುವ ಮುಹೂರ್ತ ಬಂದಿದೆ. ಕಾಮಧೇನು ಕಾಯುತ್ತ ಇರುವ ಕೋಠಡಿಯ ಬಾಗಿಲ ಬಳಿಗೆ ಬನ್ನಿ, ಒಬ್ಬೊಬ್ಬರಾಗಿ ಒಳಕ್ಕೆ ಹೋಗಿ ಮತ ನೀಡಿ ಹೊರಗೆ ಬನ್ನಿ" ಎಂದು ವಂದಿಮಾಗಧರು ಸಾರಿದರು.

ಒಂದು ಗಂಟೆಯೊಳಗಾಗಿ ಮತದಾನ ಮುಗಿಯಿತು. ಸಾಕ್ಷಾತ್ ಬೃಹಸ್ಪತಿಗಳೇ ಎಣಿಕೆ ಮಾಡಿದರು. ಎಣಿಕೆಮಾಡಿ ತಲೆ ಕೊಡವಿಕೊಂಡರು. ಎಣಿಕೆ ಪೆಟ್ಟಿಗೆಗಳಸಮೇತ ಸ್ಪರ್ಧಾಮಂಟಪದ ಬಳಿಗೆ ಬಂದರು.

ಬಂದು ಘೋಷಿಸಿದರು. ಸಾವಿರದ ಆರನೂರ ಜನ ಅಭಿಮತನೀಡಿದ್ದಾರೆ. ಒಬ್ಬರಾದರೂ ಯಾರಿಗೆ ಅವರಮತ ಎನ್ನುವುದನ್ನು ಸರಿಯಾಗಿ ಸೂಚಿಸಿಲ್ಲ. ಕೆಲವು ಮತದ ಚೀಟಿಗಳಮೇಲೆ ಕತ್ತಿಕಿವಿಗಳು ಬರೆಯಲ್ಪಟ್ಟಿವೆ. ಇನ್ನು ಕೆಲವುಗಳಮೇಲೆ ಮೀನು ಕಂಡುಬಂದಿಗೆ. ಮತ್ತೆ ಕೆಲವುಗಳಮೇಲೆ ತುಟಿಯ ಒದ್ದೆಗುರ್ತಿದೆ.

ಅಂದಮೇಲೆ ಅಭಿಮತಗಳೆಲ್ಲ ರದ್ದು.

ಸ್ವರ್ಗದ ರಚನಾಕಾನೂನಿನ ಪ್ರಕಾರ ಈ ಘಳಿಗೆಯಲ್ಲಿ ಯಾರು ಸ್ಪರ್ಧಾ ಮಂಟಪದ ಮೇಲೆ ಅಧ್ಯಕ್ಷರ ಸಿಂಹಾಸನಕ್ಕೆ ಬಲು ಹತ್ತಿರದಲ್ಲಿರುತ್ತಾರೋ ಅವರನ್ನು

ಈ ವರ್ಷದ ಸ್ವರ್ಗಸುಂದಿರಿ ಎಂದು ಘೋಷಿಸಬೇಕು ಎಂದು ಹೇಳಿ, ಅಧ್ಯಕ್ಷರ ಸಿಂಹಾಸನದ ಹತ್ತಿರ ಹೋದರು. ಆಗ ಬೃಹಸ್ಪತಿಗಳು ಕಂಡಿದ್ದು ಯಾರನ್ನು? ಶಚಿದೇವಿ ಸಿಂಹಾಸನದ ಹತ್ತಿರವೇ ಖಿನ್ನಳಾಗಿ ನಿಂತಿದ್ದಳು.

ಶಚಿದೇವಿಯೇ ಸ್ವರ್ಗಸುಂದರಿ ಎಂದು ಬೃಹಸ್ಪತಿಗಳು ಘೋಷಿಸಿದರು. ಪಾರಿಜಾತದ ಅಡ್ಡ ಕಿರೀಟವನ್ನು ಅಧ್ಯಕ್ಷರು ತೊಡಿಸಬೇಕು ಎಂದು ಸಲಹೆ ಮಾಡಿದರು.

ಅಧ್ಯಕ್ಷರ ಪೀಠವನ್ನು ಆಗ ಎಲ್ಲರೂ ನೋಡಿದರು. ಖಾಲಿ. ಅಧ್ಯಕ್ಷರು ಎಲ್ಲಿಗೆ ಯಾವಾಗ ಏಕೆ ಹೋದರು ಎಂದು ಎಲ್ಲರೂ ಕೇಳಲು ಶುರುಮಾಡಿದರು. ಎಲ್ಲೋ ದೂರದಿಂದ ಮಿಾನಿನ ವಾಸನೆ ತಿಳಿಯಾಗಿ ಬರುತ್ತಿತ್ತು.

ಅಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷರ ಅರ್ಧಾಂಗಿಯೇ ಅಧ್ಯಕ್ಷತೆಯನ್ನು ವಹಿಸಬೇಕು ಎಂದರು ಬೃಹಸ್ಪತಿಗಳು. ಹಾಗಾಗಿ ಶಚಿದೇವಿ ತನ್ನ ತಲೆಯಮೇಲೆ ತಾನೇ ಕಿರೀಟವನ್ನಿಟ್ಟುಕೊಂಡು ಗಂಧರ್ವರ ತೋಳಮೇಲೆ ಔಪಚಾರಿಕ ಮೆರವಣಿಗೆಯನ್ನು ಅನುಭವಿಸಿದಳು.

—ನೀತಿ: ಮತನೋಡಿ ಮಣಿ ಹಾಕುವುದಾದರೆ

ಮರೆತವರೇ ಮೆರವಣಿಗೆ ಹೋಗ್ತಾರೆ.

ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಶಾಂತಿ, ಸಮಾಧಾನದಿಂದ ಇರಬೇಕಾದರೆ, ದಿನಕ್ಕೆ ಎರಡು ಬಾರಿ ಅರ್ಧ ಅರ್ಧ ಗಂಟೆಯ ಹೊತ್ತು ಗಿಣಿಗೆ ಮಾತು ಕಲಿಸಬೇಕು.

—ಈ ಉಪದೇಶದನ್ನು ಯಾರು ಕೊಟ್ಟಿದ್ದು ಗೊತ್ತೆ. ವಾತ್ಸ್ಯಾಯನ ಕಾಮ ಸೂತ್ರದಲ್ಲಿ—

* * * *

ನನ್ನ ಹೆಣಕ್ಕೆ ತೋರಿಸಿದ ಮರ್ಯಾದೆಯಲ್ಲಿ ಶತಾಂಶಹತ್ತರಷ್ಟನ್ನು ಬದುಕಿರುವಾಗ ತೋರಿಸಿದ್ದರೆ, ನಾನು ಸಾಯುತ್ತಲೇ ಇರಲಿಲ್ಲ ಎಂದು ಕೀರ್ತಿಶೇಷ ಸುಬ್ಬಯ್ಯನಾಯ್ಡುರವರ ಪ್ರೇತ ನುಡಿಯಿತು ಎನ್ನುವುದು ಖಚಿತವಲ್ಲವಂತೆ.

* * * *

ಹಸಿ ಬಿಸಿ ಲಾಯರುಗಳು ಬಂದು ಮೊಕದ್ದಮೆಯನ್ನು ಕೆಡಿಸಿಬಿಟ್ಟರು.

(ಹಿರಿಯ ಲಾಯರ ಹೇಳಿಕೆ)

—ಮುದಿ ಲಾಯರುಗಳು ಬಂದು ಮೊಕದ್ದಮೆಯನ್ನು ಕೊಳೆಹಾಕಿ ಕೊಳೆಸಿದರು. (ಕಿರಿಯ ಲಾಯರ ಪ್ರಲಾಪ.)

ಕೊರವೇಶ್ವರ ವಚನಗಳು

(ರಿಸಲ್ಟ್ ಕುರಿತು)

ಡೈಲಿ ಪೇಪರುಗಳಲೆಲ್ಲ ನೀವೆ, ಹೈಕಳ ಬಾಯಲ್ಲೆಲ್ಲ ನೀವೆ; ಹೈಕಳೇನು ಅವರ ಅಪ್ಪಂದಿರ ಬಾಯಲ್ಲು ನೀವೆ, ಅಂಗಡಿ ಆಫೀಸು ಸಿನಿಮ ಹೋಟಲುಗಳಲ್ಲೆಲ್ಲ ನಿಮ್ಮ ಕುರಿತು ಊಹಾಪೋಹೆ ಚರ್ಚೆ ಕೋಲಾಹಲ, ತಿಂಗಳೆರಡೆಲ್ಲ ನಂಬರುಗಳದೇ ಸಮಾಚಾರ ಎಂದು ನಾಸಿಕಕೆ ಬೆರಳೇರಿಸಿದ ನಮ್ಮ ಕೊರವೇಶ್ವರ.

ಜಾಬಿಗೆ ಅಡ್ಡವಾಗಿ ಕುಳಿತಿತ್ತು ಫಲಿತಾಂಶ, ಮದುವೆಗೆ ಅಡ್ಡವಾಗಿ ಕುಳಿತಿತ್ತು ಫಲಿತಾಂಶ, ವಿದೇಶಯಾನಕ್ಕೆ ಅಡ್ಡವಾಗಿ ಕುಳಿತಿತ್ತು ಫಲಿತಾಂಶ, ಮನಸ್ಸಿನ ಮುಂಡಿಗೆಗಳಿಗೆಲ್ಲ ಅಡ್ಡವಾಗಿ ಕುಳಿತಿತ್ತು ಫಲಿತಾಂಶ ರಿಸಲ್ಟುಗಳನ್ನೆಲ್ಲ ತಡೆದಿಟ್ಟರೆ ಲೋಕವೇ ನಡೆಯದೇನೋ ಎಂದು ಕೌತುಕಪಟ್ಟ ನಮ್ಮ ಕೊರವೇಶ್ವರ.

ದೇವತೆಗಳು ರಾಕ್ಷಸರು ಎಂದರೆ ಬೇರಿಲ್ಲ ಕಾಣಿರೋ, ಫೆಯಿಲಾದರೂ 'ಬಾರಯ್ಯ ಕಾಫಿ ಹೀರೋಣ' ಎಂಬವನೇ ದೇವತೆ ಪಾಸಾದರೂ ನಾಷ್ಟ ಕಿತ್ತಾರೆಂಬ ಭಯದಿಂದ ತಲೆಮರೆಸಿ ಗಲ್ಲಿಯಲ್ಲಿ ಓಡಾಡುವ ಪಾಪಿಯೇ ರಾಕ್ಷಸ, ಜಸ್ಟ್ ಪಾಸಾದರೂ ಡಬ್ಬಲ್ ಸ್ವೀಟ್ ತರಿಸಿ ಆದರಿಸುವವನೇ ದೇವತೆ, ಫಸ್ಟ್‌ಕ್ಲಾಸಾದರೂ ಕೈಕುಲುಕಿಸಿಕೊಂಡು, ತುಟಿಯಂಚಿನಲ್ಲಿ ಕೊಂಕುನಗು ಚಿಮ್ಮಿಸಿ ಜಾರುವವನೇ ರಾಕ್ಷಸ ಎಂಬ ವ್ಯಾಖ್ಯಾನವ ಕೇಳಿ ತಲೆದೂಗಿದ ನಮ್ಮ ಕೊರವೇಶ್ವರ.

ಫೀಜುಕಟ್ಟಿ ಪರೀಕ್ಷೆಗೆ ಕುಳಿತಮೇಲೆ ಫೇಲಿಗೆ ಅಂಜಿದೊಡೆಂತಯ್ಯ, ಕ್ಲಾಸಿಗೆ ಚಕ್ಕರಾಗಿ, ಕಿರಿಕೆಟ್ಟಿಗೆ ಮನಸೋತು ಕಳ್ಳೆಕಾಯಿ ಮೆದ್ದಮೇಲೆ ನಂಬರು ಕಾಣದೆಂದು ಪೇಚಾಡಿದೊಡೆಂತಯ್ಯ, ರಿಸಲ್ಟು ತಂದ ಪೇಪರನ್ನು ನಂಬರು ಕಾಣದೆಂದು ಬಜ್ಜಿ ಮಾಡಿ ಎಸೆದೊಡೆಂತಯ್ಯ; ಡಿಗ್ರಿಗೆಂದು ಪಣತೊಟ್ಟಮೇಲೆ ರಾಬರ್ಟಬ್ರೂಸನ ಸ್ಮರಿಸಿ ಸೋಲಿಗಂಜದೆ ಮಜಾದಲ್ಲಿರಬೇಕು ಎಂಬ ನಮ್ಮ ಕೊರವೇಶ್ವರ.

ಪಾಸು ಪಾಸೆಂದು ಕೋಲಾಹಲದಲ್ಲಿ ಎಗರಾಡುವ ಹೈದಗಳೆ ನೀವು ಕಂಡಿರಾ ನೀವು ಕಂಡಿರಾ? ಫೆಯಿಲೆಂದು ಮೂತಿ ಬಾಡಿಸಿಕೊಂಡು ಸೊರಗಿಕುಳಿತಿರುವ ಚಿಣ್ಣಗಳೆ ನೀವು ಕಂಡಿರಾ ನೀವು ಕಂಡಿರಾ? ನಂಬರು ಕಾಣದೆ ಕಂಗೆಟ್ಟು ಮನೆಬಿಟ್ಟು ಹೋದ ನಮ್ಮ ಪುತ್ರಾಮುವನು ನೀವು ಕಂಡಿರಾ ನೀವು ಕಂಡಿರಾ? ಎಂದು ಅವರಿವರ ವಿಚಾರಿಸುತ ಅಲೆಯುತಿದ್ದ ಬಡಪಾಯಿ ಅಪ್ಪನೊಬ್ಬನ ಕಂಡು ಕನಿಕರಿಸಿದ ನಮ್ಮ ಕೊರವೇಶ್ವರ.

—ರಾಘು

ನೆಹ್ರೂಜಿ ನಮ್ಮೂರಿಗೆ ಬಂದರು !

ತುಳಸಿಮಾಲೆಯನ್ನು ಹಿಡಿದುಕೊಂಡು ಅಭಿಮನ್ಯುವಂತಿರುವ ಒಬ್ಬರು ಲಾಲ್‌ಬಾಗಿಗೆ ಓಡಿದರು. ಪೋಲೀಸ್ ವ್ಯೂಹವನ್ನು ಬೇಧಿಸಿ, ನುಗ್ಗಿದರು.

ಪಂಡಿತಜೀಯವರಿಗೆ ತುಳಸೀಮಾಲೆ ಹಾಕಿ, "ನೀವೇ ಈಗಿನ ಯುಗದ ಶ್ರೀ ಕೃಷ್ಣಪರಮಾತ್ಮರು. ಕರ್ಮಗೀತೋಪದೇಶವನ್ನು ಮಾಡಿದ್ದೀರಿ" ಅಂತ ಉದ್ಗಾರ ತೆಗೆದರು.

ಸಭೆ ಮುಗಿಯುವ ತನಕ ತುಳಿಸೀಹಾರವನ್ನು ಪಂಡಿತಜೀಯವರು ಧರಿಸಿದ್ದರು.

ಭಕ್ತರಿಂದರಲ್ಲವೇ ದೇವರು ಕೂಡ ಚಿರಾಯುವಾಗುವುದು.

*   *   *   *

ದೊಡ್ಡೋರು ಇರೋ ಸಭೆಯು ಎಲ್ಲೇ ನಡೆಯಲಿ, ಯಾರೇ ಬಂದಿರಲಿ, ಮಿಕ್ಕ ಎಲ್ಲರನ್ನು ಕೂತುಕೊಳ್ಳಿ ಅಂತ ಮೂಲೇಲಿ ಕೂರಿಸುವ ಪಾಠವನ್ನೇ ಕಲಿತಿದ್ದ ಪೋಲೀಸ್ ಪ್ಯಾದೆಯೊಬ್ಬ ರಾಷ್ಟ್ರಗೀತೆ ಹಾಡಿದಾಗ ಏಳಲು ನಿಂತ ಜನರನ್ನು ಕೂದ್ರಿ ಕೂದ್ರಿ ಅಂತ ಕುಳ್ಳಿರಿಸಿದನಂತೆ.

ನೆಹ್ರೂಜಿ ರೇಗಿ ಛೀಮಾರಿ ಹಾಕಿದರಂತೆ.

ಇನ್ನುಮೇಲೆ ರಾಷ್ಟ್ರ ರಕ್ಷಕ, ಪೋಲೀಸಿನವರು, ಸೈನ್ಯದವರು, ಸೇವಾದಳದವರು, ಸೇವಕಸಮಾಜದವರು, ಇವರುಗಳಿಗೆ ಮೊದಲು ರೀತಿನೀತಿ ಕಲಿಸಬೇಕು ಎಂದು ಪ್ರಧಾನಿಗಳು ಹುಕುಂ ಹೊರಡಿಸುವರಂತೆ.

*   *   *   *

ಹಿಂದೊಮ್ಮೆ ಇಮ್ಮಡಿದೇವರಾಜನು, ವಿಜಯನಗರದ ಅಧಿಪತಿ, ಗಜಬೇಂಟೆಕಾರ ದೇವರಾಯನು ಜೈನಮುಖಂಡರನ್ನು ವೈಷ್ಣವ ಮುಖಂಡರನ್ನು ಎದುರಿನಲ್ಲಿ ನಿಲ್ಲಿಸಿಕೊಂಡು ಒಬ್ಬರ ಕೈಯನ್ನು ಇನ್ನೊಬ್ಬರ ಕೈಲಿ ಇರಿಸಿ, ನೀವಿಬ್ಬರೂ ಸೋದರರು. ಸೌಹಾರ್ದದಿಂದ ಬಾಳುತ್ತಿರಿ. ಹಾಗೆ ಬಾಳಿ, ನಿಮ್ಮವರನ್ನೆಲ್ಲಾ ಸುಖಬಾಳಿನತ್ತ ನಡೆಸುತ್ತಿರಿ ಎಂದು ಹೇಳಿದನಂತೆ.

ಇಂದೀಗ ಎಂದೆಂದಿಗೂ ಪಿತ್ರಾರ್ಜಿತ ಆಸ್ತಿಯನ್ನು ಜೈಸುವ ಸೋದರ ಎ. ಪಿ. ಜೈನ್‌ರವರ ಆದರದ ಆಗ್ರಹದ ವಿನಂತಿಗೆ ತಲೆಬಾಗಿ ನಾನಿಲ್ಲಿಗೆ ಬಂದೆ ಎಂದು ತುಳಸೀಮಾಲಾಧರ ನೆಹ್ರೂಜಿ ಅಂದರಂತೆ.

ವಿಜಯನಗರದ, ಸ್ಥಿರಚರಿತ್ರೆ, ದಿಟವಾಗಲೂ ಮರುಕಳಿಸುತ್ತದೆ.

* * * *

ಬಾಳಿನ ಬಾಹ್ಯ ಪ್ರಗತಿಯ ಜತೆಗೆ, ಸರಿಸಮಾನವಾಗಿ ಬಾಳಿನಲ್ಲಿ ಆಧ್ಯಾತ್ಮಿಕ ಪ್ರಗತಿಯೂ ಆಗಬೇಕು ಎಂದು ಪ್ರಧಾನಿಯವರ ಈಚಿನ ಅಂಬೋಣವಂತೆ.

ಭಾರತದ ಸರ್ವಪಲ್ಲಿಯ ಅಂದರೆ ಸಕಲ ಹಳ್ಳಿಗಳ ಅನಾದಿಯಾದ ಅಧ್ಯಕ್ಷ ಆಸೆ ಇಷ್ಟೇ ಎಂದು ಈಗ ಎಲ್ಲರಿಗೂ ತಿಳಿಯಿತು ; ಅನ್ನಬಹುದು.

* * * *

"ನೆಹ್ರೂ ನಂತರ ಯಾರು ?" ಎಂದು ಬೇರೆ ಕೆಲಸವಿಲ್ಲದ ಜನ ಮಾತನಾಡುತ್ತಾರೆ.

ಯಾರು ಎಂದರೆ. ನೀವೇ ? ಎಂದು ಸುತ್ತನೆರೆದಿದ್ದ "ಸಾವಿರಾರು" ಜನರನ್ನು ತೋರಿಸಿದರಂತೆ. ಪ್ರಧಾನಿಯವರು.

—ಸಾವಿರಾರು ಜನರ ಪರಿಚಯ ನಮಗಿದೆ. ಅದಕ್ಕೇ ನಮಗೆ ಹೆದರಿಕೆ· ಇಂಥೋರು ಬಂದುಬಿಡ್ತಾರಲ್ಲ, ಮುಂದಕ್ಕೆ ಅಂತ !

* * * *

ಮಲಗುವ ಕೊಠಡಿಯಲ್ಲಿ "ಸಾಯಿಬಾಬಾ"ರವರ ಚಿತ್ರವನ್ನು ಹಾಕಿದಾರಂತೆ— ಪ್ರಧಾನಿಯವರು.

— ಆದ್ಯಂತರಹಿತನ ಆಶೀರ್ವಾದ ದೃಷ್ಟಿ ಬಲುಕಾಲ ಬೀಳುತ್ತಿರಲಿ !

* * * *

ಕಬ್ಬನಪಾರ್ಕಿನ ಹತ್ತಿರ ಸಂಜೆಯೊಂದರಲ್ಲಿ ತುದಾ ಎಂದರೆ ಎರಡು ರೂಪಾಯಿ ಸಂಪಾದಿಸುತ್ತಿದ್ದೆ, ಒಂದು ಬುಟ್ಟಿ ಮಾರಿ.

ನಮ್ಮ ಪ್ರಧಾನಿಗಳು ಬಂದದಿನ, ಹತ್ತು ರೂಪಾಯಿ ವ್ಯಾಪಾರ ಆಯ್ತು ಒಂದು ಬುಟ್ಟನೇ ಮಾರಿದ್ದು. ಅಷ್ಟು ಜನ ಸೇರಿದ್ದರು. ಅಬ್ಬಾ ಅಬ್ಬಾ ಎಂದ ನಾರಾಯಣಿ.

* * * *

ಮೋಕ್ಷಗುಂಡಂರವರ ಅಂದಿನ ಕನಸುಗಳನ್ನು ನಾವು ಇನ್ನು ಮುಂದೆಯಾದರೂ ನನಸನ್ನಾಗಿ ಮಾಡಲು ಈಗ ಧೈರ್ಯಬಂದಿದೆ—ಅವರ ಹೆಸರು ಹೊತ್ತ ವಸ್ತುಪ್ರದರ್ಶನಾಲಯವನ್ನು ನೋಡಿದಮೇಲೆ ಎಂದೊಬ್ಬರು ನುಡಿದರಂತೆ.

ಯಜ್ಞ ಪಶು

ರಾಮಪುರದಿಂದ ಭೀಮ ಮಾವ ಬಂದು, ಒಂದು ದಿನ, ನನಗೆ ನಾಗತ್ತೆ ಯಿಂದ ಜರೂರಿನ ಆಹ್ವಾನವಿದೆಯೆಂದು ತಿಳಿಸಿದಾಗ, ನನ್ನ ಮನಸ್ಸಿನ ಕಳವಳ ಅಷ್ಟಿಷ್ಟಲ್ಲ. ನಿಮಗೆ ಜ್ಞಾಪಕವಿರಬಹುದು, ಹಿಂದೆ ನಾಗತ್ತೆ, ಮದ್ರಾಸಿನ ಸುಪ್ರಸಿದ್ಧ ಹುಚ್ಚರ ಡಾಕ್ಟರು ಭುಜಂಗರಾಯರ ಮಗಳನ್ನು ನನಗೆ ಗಂಟು ಹಾಕಲು ಎರಡು ಬಾರಿ ಪ್ರಯತ್ನಿಸಿದ್ದರು. ಶೌರಿಯ ತಾತ್ಕಾಲಿಕ ಚಿಕಿತ್ಸೆಯಿಂದ ಪಾರಾಗಿದ್ದೆ. ಈಗ ಪುನಃ ಮುಟ್ಟಿದ್ದಕ್ಕೆ ಮೂರು ಬಾರಿ ಅಂತ ನಾಗತ್ತೆ ಡಾ|| ಭುಜಂಗರಾಯ ಸಜ್ಜಿತರಾಗಿ ಕಾದಿದ್ದಾರೋ ಅಂತ ಕಳವಳವಾಯ್ತು. ಆದರೂ ಶೌರಿಗೆ ತಲೆ ಕರುಳು ಸರಿಯಾಗಿರುವವರೆಗೂ ಭಯವಿಲ್ಲವೆಂದುಕೊಂಡು ಓಪೆಲ್ಲನ್ನು ಹೊರತೆಗೆಸಿದೆ.

ಭೀಮಮಾವ ತಮ್ಮ ತಕರಾರು ಲಾಯರೀನ ನೋಡಬೇಕೆಂದು ಪಟ್ಟಣದಲ್ಲೇ ಉಳಿದರು. ನಾನೂ ಶೌರಿ ನಮ್ಮ ಟೌನ್ ಹಾಲಿನ ಬಳಿ ಗರವ್ ಕಡಲೆಕಾಯಿ ವ್ಯಾಪಾರಿಗಳು ಬಂದು ಸೇರುವ ಸಮಯಕ್ಕೆ ಸರಿಯಾಗಿ ರಾಮಪುರ ಮುಟ್ಟಿದೆವು. ಕಾರಿಂದ ಇಳಿದೊಡನೆಯೇ, ಮನೆಯ ಶ್ಯಾನುಭೋಗರು ವೆಂಕಪ್ಪಯ್ಯ ಬಂದು, "ದೊಡ್ಡಮ್ಮನೋರು ನಡುಮನೇಲಿದ್ದಾರೆ. ಅಲ್ಲಿಗೇ ಬರಬೇಕಂತೆ" ಅಂತ ಹೇಳಿ ದರು ನಡುಮನೆಗೆ ಹೋದೆ.

ಸೌಖ್ಯವೇ ಅತ್ತೆ?" ಅಂದೆ.

"ನಂಗೇನಾಗಿದೆ ಬಿಡು. ನಿನ್ನ ಮಾವ ಎಲ್ಲಿ?"

"ಅವರು ಮೈಸೂರಲ್ಲೇ ಉಳಿದರು ಲಾಯರ ಹತ್ರ ಕೆಲಸವಿದೇಂತ."

"ಸರಿ ಬಿಡು ಇನ್ನೆರಡುದಿನ ಹನುಮಂತನ್ನ ಲಂಕೇಲಿ ಬಿಟ್ಟ ಹಾಗೇನೇ! ಈಗ ನಿನ್ನ ಇಲ್ಲಿಗೆ ಬರಹೇಳಿದ್ದು ಏಕೆ ಗೊತ್ತೋ?"

"ಪುನಃ ಆ ಡಾಕ್ಟರು ಭುಜಂಗರಾಯರು ಏನಾದ್ರೂ ಬಂದಿದ್ದಾರೇನು?"

"ಇಲ್ಲ. ಆ ಹುಡುಗಿ ಅದೃಷ್ಟ-ಒಬ್ಬ ಡಾಕ್ಟರನ್ನೇ ಕೈ ಹಿಡೀತಾಳೆ ಗೊತ್ತಾಗಿದೆ. ನಿನ್ನ ಹಣೇಲಿ ಅಂತಹ ದಿವ್ಯವಾದ ಸಂಬಂಧ ಎಲ್ಲಿ ಬರೆದಿರಬೇಕು? ಈಗ ಡಾಕ್ಟರ್ ಭುಜಂಗರಾಯ ಬಂದಿಲ್ಲ. ಕಲ್ಯಾಣಪುರದ ಪೀತಾಂಬರ ಉಪಾಧ್ಯಾಯರು

ಬಂದಿದ್ದಾರೆ. ಇಲ್ಲೇ ಎರಡುವಾರ ಇರ್ತಾರೆ. ಅವರ ಹೆಸರು ನೀನು ಕೇಳಿರ ಬೇಕಲ್ವೆ?"

ಸಿನಿಮಾ, ನಾಟಕ, ಕುಸ್ತಿ, ರೇಸು ಇವುಗಳಿಗೆ ಸಂಬಂಧ ಪಟ್ಟವರ ಪಟ್ಟಿಯಲ್ಲಿ ಈ ಪೀತಾಂಬರ ಉಪಾಧ್ಯಾಯನ ಹೆಸರು ಓದಿದ ಜ್ಞಾಪಕ ಬರಲಿಲ್ಲ. ನಾನೇನೂ ಹೇಳಲಿಲ್ಲ.

"ನನಗ್ಗೊತ್ತು ನಿನಗೂ ಸಾಹಿತಿಗಳಿಗೂ ಬಹಳ ದೂರ ಅಂತ. ನಿನ್ನ ಜೂಜು ಕೋರರು, ದಗಾಕೋರರು, ದಗಾಕೋರರ ಗುಂಪು ಬಿಟ್ಟರೆ ಬೇರೆ ಪ್ರಪಂಚವೇ ನಿಂಗಿಲ್ಲ ಅಂತ ನಂಗೊತ್ತು, ಹೋಗಲಿ ಈಗ ನೀನಿಲ್ಲೇ ಇದ್ದು ಈ ಪೀತಾಂಬರ ಉಪಾಧ್ಯಾಯರನ್ನು ಹೇಗಾದರೂ ಒಲಿಸಿಕೋ ಅವರು ಇಲ್ಲಿರೋತನಕ ಬೀಡಿ ಸಿಗರೇಟು, ಜೂಜು ಇವುಗಳ ಮಾತುಗಳನ್ನೆತ್ತಬೇಡ. ಊಟಕ್ಕೆ ಬರುವಾಗ ಕೈಕಾಲು ತೊಳೆದು ಷರ್ಟು ಬಿಚ್ಚಿ ಕೂತುಕೋ. ಜನಿವಾರವಿದೆಯೋ ಇಲ್ವೋ?"

"ಇದೆ ಅತ್ತೆ" ಅನ್ನುತ್ತಾ ಕಂಬಿಕಿತ್ತೆ. ಶೃಂಗೇರಿ ಮಠದಲ್ಲೇ ಇದ್ದರೆ ಮೇಲು, ಅಂತ ಅನ್ನಿಸಿತು ನನಗೆ. ಮೊದಲನೆಯ ಉಪ್ಪರಿಗೆಯಲ್ಲಿ ನನ್ನ ಮಾಮೂಲು ಕೋಣೆ ಹೊಕ್ಕೆ, ಶೌರಿ ನನ್ನ ಸಾಮಾನುಗಳನ್ನು ಜೋಡಿಸುತ್ತಿದ್ದ.

"ಶೌರಿ"

"ಸರ್"

"ಇನ್ನೆರಡು ವಾರ ಇಲ್ಲೇ ನಮಗೆ ಕೊಳೆ"

"ನಮ್ಮ ಅದೃಷ್ಟ ಸರ್, ಪೀತಾಂಬರ ಉಪಾಧ್ಯಾಯರ ಜೊತೆಯಲ್ಲಿ ಎರಡು ವಾರ ಕಳೆಯುವ ಯೋಗ ಲಭಿಸಿದ್ದು!"

"ನಿನಗವರ ಪರಿಚಯವಿದೆಯೆ ಶೌರಿ?"

ಪೀತಾಂಬರ ಉಪಾಧ್ಯಾಯರ ಪರಿಚಯವಿಲ್ಲದವರಿದ್ದಾರೆಯೆ ಸರ್? ಅವರು, ಕನ್ನಡದ ಮಿಲ್ಟನ್, ಟೆನ್ನಿಸನ್ ಅಂತ ಹೆಸರು ಗಳಿಸಿದ್ದಾರೆ. ಅವರ ನವಿಲುತಂಗ, ಕೂಕೂಕೂಗೆಲೋ! ಮಾಣಿಯುವಾಣಿ, ಕವನಗಳು ಎಷ್ಟು ಓದಿದರೂ ಸಾಲದು ಸರ್."

ಇನ್ನು ಮಿಲ್ಟನ್ ಟೆನ್ನಿಸನ್ ಯಾವ ಡಿಸ್ಟ್ರಿಕ್ಟ್‌ನೋರು ಅಂತ ಕೇಳೊಕೇ ಇಷ್ಟವಿಲ್ಲದೆ, ಕಾಫಿ ಕುಡಿದು ಹಾಗೇ ಸ್ವಲ್ಪ ತಿರುಗಾಡಲು, ಮನೆ ಬಿಟ್ಟು ಹೊರಟೆ ಗೇಟಿನ ಬಳಿ, ವಿಶು ವಿಶ್ವನಾಥ ಸಿಕ್ಕಿದ.

"ವಿಶು!" ಅಂತ ಕೂಗಿದೆ ಆಶ್ಚರ್ಯದಿಂದ.

"ಪಾಂಡು ನಿನಗಾಗಿ ಇಲ್ಲಿ ಕಾದಿದ್ದೇನೆ. ಬಾ ಹೋಗೋಣ"

ಅನ್ನುತ್ತಾ ಅವಸರದಲ್ಲಿ ನನ್ನನ್ನೂ ದಬ್ಬುತ್ತಾ ಪೇಟೆಯ ಕಡೆ ನಡೆದ.

"ಪಾಂಡು ನಾನಿಲ್ಲೇ ಇದ್ದೇನೆ. ನೀನಿಲ್ಲಿರೋತನಕ, ನನ್ನನ್ನ ಯಾವ ವಿಧದಲ್ಲೂ ಗುರುತಿಸಬೇಡ. ನಿನಗೆ ದಮ್ಮಯ್ಯ!" ಅಂದ.

"ನೀನಿಲ್ಲಿರೋದಕ್ಕೆ ಕಾರಣವೇನು ವಿಶು?"

"ನಾನಿಲ್ಲಿ ನಿನ್ನ ಮಾವ ಭೀಮರಾಯರ ವರಪುತ್ರ ಶಿಂಗ್ರುಗೆ ಪಿ.ಯು.ಸಿ. ಸಪ್ಲಿಮೆಂಟರೀಗೆ ತರಬೇತು ಕೊಡೋಕೆ ಬಂದಿದ್ದೇನೆ. ಶೀನಿ ದೊಡ್ಡ ಮನಸ್ಸು ಮಾಡಿ ಇಲ್ಲಿಗೆ ಸೇರಿಸಿದ. ನನಗೆ ಈಗ ಸ್ವಲ್ಪ ದುಡ್ಡಿನ ತಾಪತ್ರಯವಿದ್ದುದರಿಂದ ಈ ಕೆಲಸಕ್ಕೆ ಒಪ್ಪಿದೆ. ನಾನಿಲ್ಲಿ ಬಂದ ದಿನವೇ ನಿನ್ನತ್ತೆ ನನ್ನ ಕೇಳಿದರು ಪಾಂಡು ಗೊತ್ತೇ? ಅಂತ. ಅದಕ್ಕೆ ಶೀನಿ ಹೇಳಿದ ಇಲ್ಲ, ಇವನೂ ಪಾಂಡು ಅಂತಾ ಜನರ ಹತ್ತಿರವೇ ಸುಳಿಯೊಲ್ಲ ಅಂತ. ಆಮೇಲೆ ನಿಮ್ಮತ್ತೆ ಧೈರ್ಯವಾಗಿ ಶಿಂಗ್ರೂನ ನನ್ನ ಕೈಗೆ ಒಪ್ಪಿಸಿದರು"

"ಅದಿರಲಿ ವಿಶು, ಇದು ನನ್ನ ಸೋದರ ಮಾವನ ಮನೆ. ನನ್ನ ಸ್ನೇಹಿತ, ಸಹಪಾಠಿ ಅಂತ ತಿಳಿದರೆ, ನಿನಗೆ ಮತ್ತೂ ಒಳ್ಳೆಯದಲ್ಲವೆ, ವಿಶು?"

"ಇಲ್ಲ ಪಾಂಡು ನೀನೊಬ್ಬ ಪಕ್ಕಾ ಜೂಜುಕೋರ ಅಂತ ಹೆಸರುವಾಸಿಯಾಗಿದ್ದಿ. ನಾನೊಬ್ಬ ಸಂಭಾವಿತ ಅಂತ ನಿನ್ನತ್ತೆ ತಿಳಿದುಕೊಂಡಿದ್ದಾರೆ. ಈಗ ನಾನೂ ನೀನೂ ಸ್ನೇಹಿತರು ಅಂತ ಅವರಿಗೆ ಗೊತ್ತಾದರೆ ಬಂದ ದಾರಿ ಹಿಡಿಸುತ್ತಾರೆ ನಂಗೆ, ನೀನೇ ಯೋಚಿಸು ಪಾಂಡು"

ವಿಶು ಸಿಕ್ಕಿ ಹಾಕಿಕೊಂಡಿದ್ದ ಇಕ್ಕಟ್ಟಿನ ಪರಿಸ್ಥಿತಿ ನನಗರ್ಥವಾಯ್ತು.

"ನೀನೇನು ಹೆದರಬೇಡ ವಿಶು. ಆ ಸಾಹಿತಿ ಗೀತಾಂಬರ ಉಪಾಧ್ಯಾಯರು ಇಲ್ಲೇಕೆ ಬಂದಿದ್ದಾರೆ ನಿಂಗೊತ್ತೆ?"

"ಪಾಂಡು ಅವರೇನೋ ಇಲ್ಲಿಗೆ ವಿಶ್ರಾಂತಿಗಾಗಿ ಬಂದಿದ್ದಾರಂತೆ. ಆದರೆ ಅವರಿಂದ ಮತ್ತೂ ತಾಪತ್ರಯ ಕಣಯ್ಯ. ನಿನ್ನೆ ಶಿಂಗ್ರು ಸಿಗರೇಟ್ ಸೇದಿದ ಅಂತ ಅವನ ತಾಯಿ ಹತ್ತಿರ ದೂರು ಕೊಟ್ಟರು. ಅವನ ಮೇಲೆ ನನ್ನ ಹತೋಟಿ ಸಾಲದು ಅಂತ ಆಗಲೇ ನಿನ್ನತ್ತೆಯ ಅಭಿಪ್ರಾಯ. ನೀನೇ ಹೇಳು ಪಾಂಡು ಶಿಂಗುವಂತಹ ಹುಡುಗನನ್ನು ಯಾರಾದರೂ ಹತೋಟಿಯಲ್ಲಿಡಲು ಸಾಧ್ಯವೆ?"

"ನಾಲ್ಕುಜನ ಐ.ಜಿ.ಪಿಗಳು, ಎರಡು ಜೊತೆ ಪೋಲೀಸು ನಾಯಿಗಳು ಒಟ್ಟಿಗಿರುವ ಕೋಣೆಯಲ್ಲಿ ಮಾತ್ರ ಸಾಧ್ಯ" ಅಂತ ಒಪ್ಪಿಕೊಂಡೆ.

"ಈಗ ನೋಡು ತನ್ನ ಮೇಲೆ ದೂರು ಕೊಟ್ಟಿದ್ದಕ್ಕೆ ಪೀತಾಂಬರ ಉಪಾಧ್ಯಾಯರ ಮೇಲೆ ಸೇಡು ತೀರಿಸಿಕೊಳ್ಳದೆ ಬಿಡೊಲ್ಲ ಅಂತ ಘಣ ತೊಟ್ಟಿದ್ದಾನೆ ಶಿಂಗ್ರು"

"ವಿಶು ನೀನೇನು ಹೆದರ ಬೇಕಾಗಿಲ್ಲ ನಾನೆಲ್ಲ ಸರಿಪಡಿಸ್ತೇನೆ" ಅಂದೆ

"ದಮ್ಮಯ್ಯಾ ಪಾಂಡು ನೀನು ಮಾತ್ರ ನನ್ನ ವಿಷಯದಲ್ಲಿ ಕೈಹಾಕಬೇಡ. ನಾನೇ ಹುಷಾರು ತೆಗೆದುಕೊಳ್ತೇನೆ ದಮ್ಮಯ್ಯ"

"ನೀನೇನು ಹೆದರಬೇಡ" ಅಂದೆ.

ಮನೆ ಸೇರಿದ ಮೇಲೆ, ರಾತ್ರಿ ಊಟದ ಸಮಯದಲ್ಲಿ ಪೀತಾಂಬರ ಉಪಾಧ್ಯಾಯರ ಪರಿಚಯವಾಯ್ತು. ಭೀಮಮಾವ ಇನ್ನೂ ಬಂದಿರಲಿಲ್ಲ.

"ನೋಡಿ ಇವನೇ ಪಾಂಡು" ಅಂತ ನಾಗತ್ತೆ ನನ್ನನ್ನು ಸಾಹಿತಿಗಳಿಗೆ ಪ್ರದರ್ಶಿಸಿದರು.

"ಮೈಸೂರೇನಪ್ಪ?" ಅಂದರು.

"ಹೌದು" ಅಂದೆ.

ಆಮೇಲೆ ಎರಡು ದಿನಗಳು, ರಾಮಪುರದಲ್ಲಿ ಜಾಸ್ತಿ ತೊಂದರೆ ಇಲ್ಲದೆ ಕಳೆದೆವು ನನ್ನ ದಿನಚರಿ ಹೀಗಿತ್ತು ಕೋಳಿಯ ಜೊತೆ ಏಳುವುದು, ಸ್ನಾನ, ಆಹ್ನಿಕ, ತಿಂಡಿ ಕಾಫಿ, ಸಾಹಿತ್ಯ, ಸಾಹಿತಿಗಳ ಹವಾಸೇವನೆ, ಆಹ್ನಿಕ, ಊಟ, ಸಾಹಿತ್ಯ, ಬಿಡುಗಡೆ ಈ ರೀತಿ ದಿನಚರಿಯನ್ನು ನನ್ನ ಮೈ ಎಷ್ಟುದಿನ ತಡೆದುಕೊಳ್ಳಬಲ್ಲದು ಅಂತ ಯೋಚನೆ ಶುರುವಾಯ್ತು. ಮೂರನೆಯ ದಿನ ಅನಿರೀಕ್ಷಿತವಾಗಿ ಒಂದು ಪ್ರಸಂಗ ನಡೆಯಿತು.

ರಾಮಪುರದ ಮನೆಯ ಹಿಂದೆ ಒಂದು ಕೊಳವಿದೆ. ಅದರ ಮಧ್ಯದಲ್ಲಿ ಒಂದು ಮಂಟಪವಿದೆ ರಾಮನವಮಿ ಉತ್ಸವದಲ್ಲಿ ಆ ಮಂಟಪದಲ್ಲಿ ದೇವರಪೂಜೆ ನಡೆಸಿ, ಕೊಳದಲ್ಲಿ ತೆಪ್ಪೋತ್ಸವ ನಡೆಸುವುದು, ಲಾಗಾಯ್ತಿನಿಂದ ವಾಡಿಕೆಯಾಗಿ ಬಂದಿದೆ. ನಾನು ಹೇಳಿದ ಹಾಗೆ ಮೂರನೆ ದಿನ ಮಧ್ಯಾಹ್ನದ ಕಾಫಿ ಹೊತ್ತಿನಲ್ಲಿ ಉಪಾಧ್ಯಾಯರು ಕಾಣಲಿಲ್ಲ. ಹೊರಗಡೆ ಮಳೆ ಶುರುವಾಗಿತ್ತು. ಎಲ್ಲಿ ಹುಡುಕಿದರೂ ಸಾಹಿತಿಗಳಿಲ್ಲ. ವಿಶೂನ ಸಂಕಟ ಅಷ್ಟಿಷ್ಟಲ್ಲ, ಎಲ್ಲರೂ ಶಿಂಗ್ರೂ ಕಡೆ ನೋಡಿದೆವು.

"ನಾನವರನ್ನ ಇವತ್ತೆಲ್ಲಾ ನೋಡಿಯೇ ಇಲ್ಲ" ಅಂದ.

ಕಾಫಿ ಮುಗಿಸಿ ಕೋಣೆ ಸೇರಿದೆ.

"ಶೌರಿ" ಅಂತ ಕರೆದೆ.

"ಸರ್"

"ಪೀತಾಂಬರರಾಯರು ಮಾಯವಾಗಿದ್ದಾರೆ. ಹುಡುಕಿಕೊಟ್ಟವರಿಗೆ ವಿಶು ಇನಾಮು ಕೊಡುತ್ತಾನೆ" ಅಂದೆ.

" ಅವರು ಕೊಳದ ಮಧ್ಯೆ ಮಂಟಪದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಸರ್. ಅವರು ಮಂಟಪಕ್ಕೆ ಹೋದ ತೆಪ್ಪದ ದೋಣಿ ಮಾಯವಾಗಿದೆ. ಈಜಿಕೊಂಡು ಬರೋಣಾಂದ್ರೆ ದಡದಲ್ಲಿ ಟೈಗರ್ ಗುರುಗುಟ್ಟುತ್ತಾ ನಿಂತಿದೆ ಸರ್."

ಮಳೆಯ ರಭಸ ಹೆಚ್ಚಿತು.

" ಶೌರಿ ಆ ಸಾಹಿತಿ ಮನೇಲಿ ಬಿದ್ದಿರದೆ ಮಂಟಪಕ್ಕೆ ಏಕೆ ಹೋಗಬೇಕಿತ್ತು?"

" ಪ್ರಾಯಶಃ ಸಾಹಿತ್ಯದ ಸ್ಫೂರ್ತಿಗಾಗಿ ಸಾರ್. ಪ್ರಾಯಶಃ ಅವರು ಮಂಟಪ ಸೇರಿದೊಡನೆ ಶಿಂಗ್ರು ದೋಣೀನ ಕಲ್ಲುಗಳಿಂದ ಹೊಡೆದು ದಡಕ್ಕೆ ಎಳೆದು ಎಲ್ಲೋ ಬಚ್ಚಿಟ್ಟಿರಬೇಕು ಸರ್."

ಶಿಂಗ್ರು ಶುದ್ಧ ಪೋಕರಿ ಅಂತ ಗೊತ್ತಿತ್ತು. ಆದರೆ ಈ ರೀತಿ ಮಾರೀಚ ಬಕಾಸುರರನ್ನು ಮೀರಿಸುವಂತಹ ಕ್ರೂರ ಸ್ವಭಾವದವನು ಅಂತ ಎಣಿಸಿರಲಿಲ್ಲ. ಈಗ ಭಾರತದ ರಕ್ಷಣಾಸಚಿವನಾಗಿ, ಶಿಂಗ್ರುವಂತಹ ಕ್ರೂರಿ ಒಬ್ಬ ಇರಬೇಕು. ಶೌರಿಗೆ ವಿಶುವಿನ ತಾಪತ್ರಯವನ್ನು ಸೂಕ್ಷ್ಮವಾಗಿ ತಿಳಿಸಿದೆ. ಹೇಗಾದರೂ ಮಾಡಿ, ಶಿಂಗ್ರು ಮೇಲೆ ಗುಮಾನಿ ಬರದ ಹಾಗೆ, ಸಾಹಿತಿಗಳನ್ನು ಜೀವಸಹಿತ ಮನೆ ಸೇರಿಸುವಂತೆ ಹೇಳಿದೆ.

" ಆಗಲಿ ಸರ್ " ಅಂದ.

ರಾತ್ರಿ ಊಟದ ಸಮಯದಲ್ಲಿ ಪೀತಾಂಬರ ಉಪಾಧ್ಯಾಯರು ಎಂದಿನಂತೆ ಹಾಜರಿದ್ದರು. ಭೀಮಮಾವ ಅದೇ ಸಂಜೆ ಬಂದಿಳಿದಿದ್ದರು. ಆದರೆ ಅವರಿಗೆ ಶಿಂಗ್ರುವಿನ ಕ್ರೌರ್ಯ ಏನೂ ತಿಳಿದಿರಲಿಕ್ಕಿಲ್ಲ. ಯಾವತ್ತಿನ ಹಾಗೆ ತಮ್ಮ ಬೆಪ್ಪು ಮೋರೆ, ಹುಚ್ಚುಮಾತುಗಳಿಂದ ಕಂಗೊಳಿಸುತ್ತಿದ್ದರು. ಸಾಹಿತಿಗಳು, ನೊಂದ ಜೀವಿಯಂತೆ, ನನ್ನೊಂದು ಬಾರಿ, ಶೌರಿಯನ್ನೊಂದು ಬಾರಿ ನೋಡುತ್ತಿದ್ದರು. ಶಿಂಗ್ರು, ವಿಶು ಅದೇತಾನೆ ಪಾಶಿಯಿಂದ ತಪ್ಪಿಸಿಕೊಂಡವರಂತೆ ತಲೆ ಬಗ್ಗಿಸಿಕೊಂಡು ಮೌನವಾಗಿದ್ದರು. ಊಟವಾದ ಮೇಲೆ, ಸಾಹಿತ್ಯಕ್ಕೆ ರಜ ಹೇಳಿ ನನ್ನ ಕೋಣೆ ಸೇರಿದೆ.

" ಸರ್ "

" ಏನು ಶೌರಿ ? "

" ಉಪಾಧ್ಯಾಯರನ್ನ ನೋಡಿದಿರಾ ಸರ್ ? "

" ಮಂಟಪದಿಂದ ಹೇಗೆ ಪಾಸಾದರು ?

" ಕೊಳದಲ್ಲಿ ಒಂದು ಕಡೆಯಿಂದ ನಡುವಿನ ಎತ್ತರ ಮಾತ್ರ ನೀರಿದೆ ಸರ್. ನಾನು ಭುಜದ ಮೇಲೆ ಕೂಡಿಸಿಕೊಂಡು ನಡೆದೇ ಸರ್ "

" ಟೈಗರ್ ? "

" ಮೊದಲೇ ಮನೇಲಿ ಕಟ್ಟಿಹಾಕಿದ್ದೆ ಸರ್ "

" ಅವರಿಗೆ ಶಿಂಗ್ರು ಮೇಲೇನಾದರೂ ಗುಮಾನಿ ಇದೆಯೇ ಶಾರಿ ? "

" ಮೊದಲು ಹಾಗೇ ತಿಳಿದಿದ್ರು ಸರ್. ತಾವು ದೂರು ಕೊಟ್ಟಿದ್ದಕ್ಕೆ, ಸೇಡು ತೀರಿಸೋದಕ್ಕೆ ಈ ರೀತಿ ಮಾಡಿರಬಹುದು ಅಂತ ನಂಬಿದ್ದರು ಸರ್ "

" ಹಾಗಾದರೆ ವಿಶುಗತಿ ಏನು ಶಾರಿ ? "

" ಈಗೇನು ಪರವಾಗಿಲ್ಲ ಸರ್. ಈ ಕೆಲಸ ನಿಮ್ಮಿಂದ ನಡೆದಿದೆ ಅಂತ ಹೇಳಿದೆ. ನಿಮಗೆ ಸ್ವಲ್ಪ ಕೀಟಲೆ ಸ್ವಭಾವ ಮೊದಲಿಂದ ಹುಟ್ಟುಗುಣ ಅಂತ ಹೇಳಿದೆ ಸರ್ ಈಗ ಶಿಂಗ್ರುಮೇಲೆ ಏನೇನೂ ಅನುಮಾನವಿಲ್ಲ ಸರ್. ನಿಮ್ಮ ಸ್ನೇಹಿತರ ಬಗ್ಗೆ ಏನೂ ಯೋಚಿಸಬೇಡಿ ಸರ್."

ಪತ್ತೇದಾರ್ ಪುರುಷೋತ್ತಮನ ಹಾಗೆ ಸ್ಥಂಭೀಭೂತನಾದೆ !

" ಶಾರಿ ನೀನು ವಿಶೂನ ಸಮಸ್ಯೇನ ಯಶಸ್ವಿಯಾಗಿ ಪರಿಹಾರ ಮಾಡಿದ್ದೇನೆ ಅಂತ ತಿಳಿದಿರಬಹುದು. ಆದರೆ ನನ್ನನ್ನ, ಯಜ್ಞಪಶುವನ್ನಾಗಿ ಮಾಡಿದ್ದೀ ಅಂತ ನಿನ್ನ ತಲೆಗೆ ಮುಂದಟ್ಟಾಗಿದೆಯೆ ? " ಅಂದೆ ಬಿರುಸಾಗಿ.

" ಕ್ಷಮಿಸಿ ಸರ್, ಪೀತಾಂಬರ ಉಪಾಧ್ಯಾಯರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡೋಕೆ ನಿಮಗಿಷ್ಟವೆ, ಸರ್ ? "

" ಇಲ್ಲ "

" ಒಂದು ವೇಳೆ ನಿಮ್ಮ ಅತ್ತೆಯವರು ನಿಮಗೆ ಆ ಕೆಲಸ ಮಾಡು ಅಂತ ಆಜ್ಞೆ ಇತ್ತಿದ್ದರೆ, ಆಗೊಲ್ಲ ಅಂತ ಹೇಳೋಕೆ ನಿಮಗೆ ಧೈರ್ಯ ಬರುತಿತ್ತೆ ಸರ್ ? "

" ಇಲ್ಲ "

" ಸರಿ ಸರ್. ಅಂತಹ ಸನ್ನಿವೇಶ ಇಲ್ಲಿ ಉದ್ಭವವಾದ್ದರಿಂದ ಈ ರೀತಿ ಮಾಡ ಬೇಕಾಯ್ತು ಸರ್. ನೀವಿಲ್ಲಿಂದ ಮುಂಜಾನೆಯೆ ಹೊರಡುವುದಿದ್ದರೆ ಮಂಟಪದ ವಿಷಯ ನಿಮ್ಮತ್ತೆಯ ಮುಂದೆ ಹೇಳೊಲ್ಲ ಅಂತ ಉಪಾಧ್ಯಾಯರು ಹೇಳಿದ್ದಾರೆ ಸರ್. ನೀವು ಮುಂಜಾನೆಯೇ ಎದ್ದು ಹೊರಟುಬಿಟ್ಟರೆ ನಾನು ಹಿಂದಿನಿಂದ ಓಪೆಲ್ ತರ್ತೀನೆ ಸರ್. ಮತ್ತೇನಾದರೂ ಈಗ ಬೇಕೇನು ಸರ್ ?

" ಏನೂ ಇಲ್ಲ ಶಾರಿ " ಅಂದೆ.

—" ಕೇಫ "

ಅವಧಾನಿಗಳು ಆಚಾರ್ಯರು ಮತ್ತು ಆಸ್ಪತ್ರೆಯ ದಾದಿ

ಮುಂಜಾವಿಂದ ಸಂಜೆಯವರೆಗೆ ವೇದಶಾಸ್ತ್ರಪಾರಾಯಣ ಮಾಡುತ್ತ, ಭಗವನ್ನಾಮ ಸಂಕೀರ್ತನೆ ಮಾಡುತ್ತ, ಅವಧಾನಿಗಳು ತಮ್ಮ ಇಡೀ ಆಯುಷ್ಯವನ್ನು ಕಳೆದರು. ಭಗವಂತನ ಮಹಾಮಹಿಮೆಯನ್ನು ಜನರಿಗೆ ತಿಳಿಸುತ್ತ ಜನರು ಭಗವದ್ಭಕ್ತರಾಗುವಂತೆ ತುಂಬಾ ಶ್ರಮ ವಹಿಸಿದ್ದರು.

ಸಹಸ್ರಚಂದ್ರ ದರ್ಶನ ಮಾಡಿದಮೇಲೆ, ಪೂರ್ಣವಯಸ್ಸಿನಲ್ಲಿ ಅವಧಾನಿಗಳು ನಿಧನ ಹೊಂದಿದರು. ದಹನ ಸಂಚಯನಗಳಾದುವು.

ಹತ್ತನೆಯದಿನ ಋಣಾನುಬಂಧ ಹರಿದುಹೋಯಿತು ಎನ್ನುವ ಸಂಕೇತದ ತರ್ಪಣವನ್ನು ಪುತ್ರರು, ಶಿಷ್ಯಂದಿರು ಕೊಟ್ಟಮೇಲೆ, ಅವಧಾನಿಗಳು ಸ್ವರ್ಗದ ಬಾಗಿಲನ್ನು ಸೇರಿದರು.

ಆ ಹೊತ್ತಿಗೆ ಅಲ್ಲಿಗೆ ಆಚಾರ್ಯರೂ ಬಂದಿದ್ದರು. ಪ್ರಾಚೀನ ಮಠದ ಆಚಾರ್ಯರು ನೂರು ವರ್ಷಗಳಕಾಲ ಬಾಳಿ, ಶಿಷ್ಯಕೋಟಿಗೆ ಆಧ್ಯಾತ್ಮಿಕ ಸೊಬಗನ್ನು ಹೃದಯಂಗಮವಾಗಿ ವರ್ಣಿಸಿದ್ದರು. ಇಹದಲ್ಲಿ ಹಿತಬಾಳನ್ನು ನಡೆಸುವ ನೀತಿಯನ್ನು ಪರದಲ್ಲಿ ಸ್ವರ್ಗಕ್ಕೆ ಹೋಗುವ ಹಕ್ಕನ್ನು ಪಡೆಯುವ ರೀತಿಯನ್ನು ಆಚಾರ್ಯರು ಬೋಧಿಸಿದ್ದರು.

ತಮ್ಮ ಇಹಲೋಕದ ಋಣವನ್ನು ತೀರಿಸಿದ್ದಾಯಿತು ಎಂದು ಅವರಿಗೆ ಒಳದನಿನುಡಿದಾಗ–ಇಚ್ಛಾಮರಣಿಗಳು ಅವರು ; ಸಮಾಧಿಯನ್ನು ಪ್ರವೇಶಿಸಿ ನಿಧನ ಹೊಂದಿದ್ದರು.

ಮೆಚ್ಚಿನ ಶಿಷ್ಯ ಕೋಟಿಯು ಅವರ ತಲೆಮೇಲೆ ತೆಂಗಿನಕಾಯನ್ನು ಒಡೆದು ಉಪ್ಪು ತುಂಬಿ ದೇಹವನ್ನು ಸಮಾಧಿಮಾಡಿ, ಅಂತ್ಯ ಕ್ರಿಯೆಗಳನ್ನು ರೂಢಿಯಂತೆ ನಡೆಸಿದ್ದರು.

ಅವರೂ ಸ್ವರ್ಗದ ಬಾಗಿಲಿಗೆ ಆ ಹೊತ್ತಿಗೆ ಬಂದಿದ್ದರು.

ಅದೇ ಹೊತ್ತಿಗೆ ನಲವತ್ತರ ಪ್ರಾಯದ ಆಸ್ಪತ್ರೆಯ ದಾದಿಯೊಬ್ಬಳು ಬಂದು ನಿಂತಳು. ಹತ್ತಾರು ಆಸ್ಪತ್ರೆಗಳಲ್ಲಿ ಆಕೆ ಕೆಲಸ ಮಾಡಿದ್ದಳು. ಒಂದೊಂದು ಕಡೆಯಲ್ಲೂ ನೂರಾರು ರೋಗಿಗಳನ್ನು ದಿನಾಲೂ ನೋಡಿಕೊಳ್ಳುತ್ತಿದ್ದಳು. ಒಂದು ಆಸ್ಪತ್ರೆಯಲ್ಲಿ ಒಂದು ವರ್ಷದಮೇಲೆ ಇರದೆ ಹತ್ತಾರು ಆಸ್ಪತ್ರೆಗಳಲ್ಲಿ ತನ್ನ ದಾದಿ ತನವನ್ನು ಪ್ರದರ್ಶಿಸಿದ್ದಳು. ತನ್ನ ಸುಖಕ್ಕಾಗಲೀ, ತನ್ನ ಸೊಬಗಿಗಾಗಲಿ ಸ್ವಲ್ಪವೂ ಕುಂದುಬರದಂತೆ ಸೇವೆ ಸಲ್ಲಿಸಿದ್ದಳು. ಅವಳ ಕೈಗೆ ಸಿಕ್ಕಿದ ರೋಗಿಗಳು ಹಾಗಿರಲಿ, ರೋಗಿಗಳ ಬಂಧುಬಳಗದವರು ಹಾಗಿರಲಿ, ಅವಳ ಜತೆ ಕೆಲಸಮಾಡುವ ವೈದ್ಯರು ಇತರ ಸಿಬ್ಬಂದಿ ವರ್ಗದವರು, ಇವರನ್ನುಕೂಡ ಆಕೆ ಸತಾಯಿಸಿ, ಗೋಳಿಟ್ಟು, ಕಾಡಿ, ಕೊರಗಿಸಿದ್ದಳು. ಕಡೆಗೊಮ್ಮೆ ಸಿಟ್ಟುಗೊಂಡು ಆಕೆ ರಾಜೀನಾಮೆಕೊಟ್ಟು ಆಸ್ಪತ್ರೆಯಿಂದ ಹೊರ ಹೊರಟು, ಅಲ್ಲಿಯೇ ನಿಂತಿದ್ದ ಆಟೋರಿಕ್ಷಾ ಒಂದರಲ್ಲಿ ಕೂತು, ಬಲತಾಯಿ ಇದ್ದ ಮನೆಗೆ ಹೊರಟಳು. ಆಟೋರಿಕ್ಷಾದವನಿಗೆ ಈಕೆಯನ್ನ ಕಂಡು ಏನಾಯ್ತೋ ಏನೋ ವೇಗವಾಗಿ ಗಾಡಿ ಹೊಡೆದ. ಆ ರಭಸದಲ್ಲಿ ಎದುರಿಗೆ ಬರುತ್ತಿದ್ದ ಸೇಂದಿಲಾರಿಗೆ ಗುದ್ದ. ಆಕೆಯೂ ಮೃತಿ ಹೊಂದಿದ್ದಳು, ಆಟೋರಿಕ್ಷಾ ಸಾರಥಿಯೂ ಮರಣ ಹೊಂದಿದ್ದ.

ಆಸ್ಪತ್ರೆಯ ದಾದಿ ಜತೆಗೆ ಆಟೋರಿಕ್ಷಾ ಸಾರಥಿಯೂ ಸ್ವರ್ಗದ ಬಾಗಿಲ ಬಳಿ ನಿಂತಿದ್ದ. ಅದೇ ಹೊತ್ತಿನಲ್ಲಿ.

ಸ್ವರ್ಗದ ಬಾಗಿಲು ಕಾಯುತ್ತಿದ್ದವನಿಗೆ ಎಲ್ಲ ವಿಷಯಗಳೂ ಗೊತ್ತಿದ್ದಿತು. ಆಟೋರಿಕ್ಷಾದ ಸಾರಥಿಯನ್ನೂ ಆಸ್ಪತ್ರೆಯ ದಾದಿಯನ್ನೂ ಮೊದಲು ಸ್ವರ್ಗದೊಳಕ್ಕೆ ಪ್ರವೇಶಮಾಡಿಸಿದ.

ಇದು ಆಚಾರ್ಯರಿಗೂ ಅವಧಾನಿಗಳಿಗೂ ಸ್ವಲ್ಪ ವಿಚಿತ್ರವಾಗಿ ಕಂಡಿತು; ನಾವು ಮೊದಲು ಬಂದವರು. ನಮ್ಮನ್ನು ಮೊದಲು ಏಕೆ ಬಿಡಲಿಲ್ಲ ಎಂದು ಕೇಳಿದರು.

ಭೂಲೋಕದಲ್ಲಿ ಆಟೋರಿಕ್ಷಾ ಸಾರಥಿಗಳೂ, ಆಸ್ಪತ್ರೆಯ ದಾದಿಗಳೂ ಸಾವಿರಾರು ಜನರಿಗೆ ದಿನ ಸಂಜೆ ಅನ್ನದೆ ನರಕ ದರ್ಶನಮಾಡಿಸಿ, ನರಕಯಾತನೆಯನ್ನು ಕೊಟ್ಟು, ನರಕ ಸಂಕಟ ಪಡಿಸಿ, ಜನ ಸ್ತೋಮವೆಲ್ಲಾ "ಭಗವಂತ! ನೀನೇ ಗತಿ ನಮಗೆ" ಅಂತ ದೈನ್ಯದಿಂದ ಪ್ರಾರ್ಥನೆ ಮಾಡುವ ಹಾಗೆ ಮಾಡಿದ್ದಾರೆ. ಅವರು ಸಾಧಿಸಿದ ಪುಣ್ಯದ ಮುಂದೆ ನಿಮ್ಮಗಳದು ಏನ್ರಿ ಮಹಾ! ಎಂದು ಸ್ವರ್ಗದ ಕಾವಲುಗಾರ ಉತ್ತರ ಹೇಳಿದ.

—ಬಚ್ಚಿ

ಆಗುಲ್ಲ ಅಂದ್ರೆ

"ನನ್ನ ಕೈಲಾಗುಲ್ಲ ಅಂದ್ರೆ". ಅಂದಳು.

"ನಿನ್ನ ಕೈಲಿ ಏನು ಆಗುಲ್ವೆ" ಎಂದೆ. ಆಕೆ ಅಂದಿದ್ದನ್ನು ಅರ್ಥಮಾಡಿಕೊಳ್ಳುಕ್ಕೆ ನನ್ನ ಜೀವಮಾನವೆಲ್ಲಾ ಕಷ್ಟಪಟ್ಟು, ಇದೊಂದನ್ನು ನೆಪೋಲಿಯನ್ನು ಕೂಡ ಅಸಾಧ್ಯ ಅಂತ ಒಪ್ಪಿಕೊಳ್ಳುತ್ತಿದ್ದ, ಎಂಬ ನಿರ್ಧಾರಕ್ಕೆ ಬಂದಿದ್ದೆ. ಅದಕ್ಕೇ ವಿವರಣೆಯನ್ನು ಕೇಳಿದೆ.

"ಇಷ್ಟೂ ಗೊತ್ತಾಗಲಿಲ್ವೇ ಅಂದ್ರೆ" ಅಂದಳು.

ಹ್ಞೂ ಎಂದು ತಲೆಯಾಡಿಸಿದೆ.

"ಅಮರಾವತಿ ಹತ್ತಿರ ಏಗುಕ್ಕೆ ನನ್ನ ಕೈಲಾಗುಲ್ಲ ಅಂದ್ರೆ" ಅಂದಳು.

ಅಮರಾವತಿ :—ಇಂದ್ರನ ರಾಜಧಾನಿ ಸ್ವರ್ಗದ ಕೇಂದ್ರ ಹೂವು ಬಾಡುಲ್ಲ ಅಪ್ಸರೆಯರು ಕಾಮಧೇನು ಕೆಚ್ಚಲು ಸುತ್ತಲೂ ಕಿನ್ನರರು, ಕೆಂಪುರುಷರು ತಲೆ ಇದ್ದರೆ ಒಡಲಿಲ್ಲ. ಒಡಲಿದ್ದರೆ ತಲೆಯಿಲ್ಲ. ಎರಡೂ ಇಲ್ಲದೆ ಸ್ವರ್ಗ ಕಂಡವರು ಹೀಗೆ ನವ್ಯಕಾವ್ಯದ ರೀತಿ, surrealist painting ತರಹ ನನ್ನ ಯೋಚನೆಗಳು ಬಾಲಗೋಂಚಿ ಇಲ್ಲದ ಗಾಳಿಪಟದಂತೆ ಹಾರುತ್ತಿತ್ತು.

"ಅಮರಾವತಿ! ಅಲ್ಲಿಗೆ ಯಾವಾಗ ಹೋಗಿದ್ದೆಯೇ! ನನಗೆ ಹೇಳದೆ, ಯಾರನ್ನೂ ಕೇಳದೆ ಯಾಕೆ ಹೋದೆಯೇ" ಎಂದು ಸ್ವಲ್ಪ ಕೋಪಿಸಿಕೊಂಡೇ ಕೇಳಿದೆ.

"ಎಲ್ಲಿಗೆ ಯಾಕಾರೂ ಹೋಗಲಿ, ಅಮರಾವತಿ ನನ್ನ ಮನೆಗೆ ಬರುತ್ತಾಳೆ. ನೀವೇ ಅಲ್ಲವೇ ಹೇಳಿದ್ದು. ಅವರಪ್ಪ ಒಳ್ಳೆಯವನು ಕಣೆ, ಹೆಂಡತಿ ಕಳಕೊಂಡಿದ್ದಾನೆ. ಒಬ್ಬಳೇ ಮಗಳು. ಬಡವ; ಮನೆಕೆಲಸಕ್ಕೆ ಇಟ್ಟುಕೊ ಅಂತ ನೀವೇ ಅಲ್ಲವೇ ಹೇಳಿದ್ದು. ಇವತ್ತು ಅವಳನ್ನ ಕಳಿಸಿಬಿಟ್ಟೆ, ನೀವೇನಾದರೂ ಅನ್ನಿ ನನ್ನ ಕೈಲಾಗುಲ್ಲ ಅವಳ ಜತೆ ಏಗುಕ್ಕೆ" ಎಂದಳು.

ಇದೊಂದೂ ನನಗೆ ಅರ್ಥವಾಗಲಿಲ್ಲ. "ಯಾರೆ ಅಮರಾವತಿ" ಎಂದೆ. "ಮನೆಕೆಲಸದ ಹುಡುಗಿ, ಅಮರಾವತಿ ಗೊತ್ತಿಲ್ಲವೇ" ಎಂದಳು ದಿಟವಾಗಲೂ

ನನಗೆ ಗೊತ್ತಿದ್ದಿಲ್ಲ. ಆದರೂ ಸ್ವಲ್ಪ ಯೋಚನೆಮಾಡಿದೆ. ನನ್ನ ವಯಸ್ಸಿನಲ್ಲಿ ಮಕ್ಕಳನ್ನು ಮೆಚ್ಚಿ ಮಾತಾಡುವುದು ಸ್ವಾಭಾವಿಕ. ಹಾಗೇನಾದರೂ ಮಾತನಾಡು ವಾಗ ಅಮರಾವತಿ ಅಂತ ಹೇಳಿದ್ದೆನೆ? ಆ ತರಹ ಅನುಮಾನದಿಂದ ಈಕೆ ಹೀಗೆ ಆಡಿದಳೋ ಎನ್ನಿಸಿತು. "ಯಾವ ಮನೆ ಕೆಲಸದ ಹುಡುಗಿ?" ಎಂದು ಕೇಳಿದೆ.

* * * *

ನೆಲದಮೇಲಿದ್ದ ಚಾಪೆಯಮೇಲೆ, ಸೋಫಾನ ಒರಗಿಕೊಂಡು ಕೂತಿದ್ದೆ. ಪಕ್ಕದಲ್ಲಿದ್ದ ಸೋಫಾದ ಮೇಲೆ ಕುಳಿತು ಆಕೆ ಹೇಳಿದಳು.

"ಅವತ್ತೇನೋ ಹೇಳಿದಿರಿ ತಬ್ಬಲಿಹುಡುಗಿ ಅಂತ. ನನಗೂ ಅಯ್ಯೋ ಅನ್ನಿಸಿತು. ಆಗಲಿ ಅಂತ ಕೆಲಸಕ್ಕೆ ಇಟ್ಕೊಂಡೆ. ಕೆಲಸ ಏನೂ ಬರದು ಅದಕ್ಕೆ. ನಾನೇ ಕಲಿಸಿಕೊಟ್ಟೆ. ಆದರೆ ಈಗೀಗ ತಡೆಯಕ್ಕಾಗುಲ್ಲ ಅಂದ್ರೆ.

ಮೊನ್ನೆ ನೋಡಿ, ಮಾರ್ಕೆಟ್ಟಿಗೆ ಹೋಗಿ ತರಕಾರಿ ತಂದು, ತೊಳೆದು ಇಡು ಎಂದು ಹೇಳಿದೆ. ಬಕ್ಕಿಟನ್ಲ್ಲಿ ಅವನ್ನು ಹಾಕಿ ಜಾಲಿಸುತ್ತಾ "ಈ ಮುಲ್ಲಂಗೀಗೆ ಎಷ್ಟು ಕೊಟ್ಟರಿ" ಎಂದಳು. "ಎಪ್ಪತ್ತೈದು ನಯಾಪೈಸೆ ಕಾಲು ಕಿಲೋಗ್ರಾಮಿಗೆ" ಎಂದೆ. ಅಬ್ಬಾ! ಅಂದಳು ನಮ್ಮಪ್ಪ ತಂದರೆ ಹತ್ತು ನಯಾಪೈಸೆ ಕೊಡ್ತಾನೆ ಅಂದಳು.

ಈರುಳ್ಳಿ ಗಡ್ಡೆಗಳನ್ನು ತೊಳೆಯುತ್ತ ಇವಕ್ಕೆಷ್ಟು ಎಂದಳು

ವೀಸೆಗೆ ಮೂರು ರೂಪಾಯಿ ಎಂದೆ.

ಕಣ್ಣೀರು ಹಾಕುತ್ತ ಹಾಗೆ ಕೊಟ್ಟರೆ ಮನೆ ಉಳಿಯುತ್ತಾ ಎಂದಳು.

ಹೊನಗೊನೆ ಸೊಪ್ಪು ತೊಳೆಯುತ್ತ ಕಂತೆಗೆಎಷ್ಟು ಎಂದು ಕೇಳಿದಳು. ಹತ್ತು ನಯೇಪೈಸೆ ಎಂದೆ.

ನನಗೆ ರೇಗಿಹೋಗಿತ್ತು. ಎಷ್ಟು ಕೊಟ್ಟು ತಂದರೆ ನಿನಗೇನೆ, ಚೆನ್ನಾಗಿ ತೊಳೆದು ಹರವಿಟ್ಟು ಹೋಗೆ ಎಂದು ರೇಗಿದೆ.

ಹತ್ತು ನಯಾಪೈಸೆ ನನಗೆ ಒಂದಿನದ ಕೂಲಿ ಈ ಸೊಪ್ಪಿಗೆ ಎಂದು ಅಳುಕ್ಕೆ ಶುರು ಮಾಡಿದಳು ಸೊಪ್ಪನೆಲ್ಲಾ ಅವಳ ಕಣ್ಣೀರಿನಲ್ಲೇ ತೊಳೆದಳು. ಸಾಕು! ಹೋಗೆ. ನಿಮ್ಮಪ್ಪನ ಮನೆಗೆ ಹೋಗಿ ಸುಖವಾಗಿರೆ! ಅಂತ ಹೇಳಿ ಅವಳನ್ನ ಕಳಿಸಿಬಿಟ್ಟೆ ಅಂದರೆ. ಇನ್ನುಮೇಲೆ ಮನೆಕೆಲಸಾನ ನಾನೇ ಮಾಡಿಕೋತೀನಿ, ಇನ್ನುಮೇಲೆ ಬೇರೆ ಯಾರೂಬೇಡ ಅಂದಳು.

" ಅಲ್ಲ ಕಣೇ ! ನಿನಗೆ ಬೇಕಿಲ್ಲದ ಅಮರಾವತಿ ನನಗ್ಯಾಕೆ ಬೇಕು ! ಮನೆ ಕೆಲಸ ನೀನೇ ಮಾಡಿಕೊಂಡರೆ ನನಗಿನ್ನು ಚೆಂದ ಅಲ್ಲವೇ ! ಇದಕ್ಕೆ ಯಾಕೆ ಯೋಚನೆ " ಎಂದೆ.


" ಅಲ್ಲಾ ಅಂದ್ರೆ ಅವಳನ್ನ ಒದ್ದೋಡಿಸಿದಮೇಲೆ ಅವಳ ನೆನಪೇ ದೊಡ್ಡದಾಗಿದೆ. ಅಪ್ಪನಮನೇಲಿ ಅವಳು ಎಷ್ಟು ಸುಖವಾಗಿರ್ತಾಳೋ ಅಂತ ಹೊಟ್ಟೆ ಉರಿಯಕ್ಕೆ ಶುರುವಾಗಿದೆ " ಎಂದಳು.

" ಅಂದರೆ ? " ಅಂತ ನಾನಂದೆ, ಆಸೆಯಿಂದ ಹುಬ್ಬುಗಳನ್ನೆತ್ತಿ ಅಂದರೆ ಅವಳ ಹಾಗೇ ನಾನೂನೂ ಅಪ್ಪನ ಮನೆಗೆ ಹೋಗಿ ಸುಖವಾಗಿರ್ತೀನಿ ಅಂದ್ರೆ. " ಕೂಡಿದೋರ ಕಷ್ಟದಲ್ಲಿ ನಾನ್ಯಾಕೆ ಒದ್ದಾಡಲಿ ಅಮರಾವತಿ ತರಹ ನಾನೂ ಅಪ್ಪನ ಮನೆಗೆ ಹೋಗ್ತೀನಿ " ಎಂದಳು.

" ಹಾಗೆ ಮಾಡು, ಅಮರಾವತಿ ತರಹ ಅಪ್ಪನ ಮನೆಯಲ್ಲಿ ಸುಖವಾಗಿರು ಎಂದು ಹೇಳಿ ಅವಳ ಅಪ್ಪನೂರಿಗೆ, ಒಂದೇ ಮಾರ್ಗದ ಟಿಕೇಟು ಕೊಂಡುಕೊಟ್ಟು ಕಳಿಸಿಕೊಟ್ಟೆ.

ಈಗ ನೆಮ್ಮದಿಯಾಗಿ ಇದ್ದೇನೆ ಸಧ್ಯ !

—ಕುಮಾರ್



ಅಂಡ ಹಾಗೆ-ಶಾಲಾ ಹುಡುಗರಿಗೆ ಕೊಡೋ ಹಾಗೆ ಮಧ್ಯಾಹ್ನದ ಊಟಾನಾ ಶಾಲಾ ಮಾಸ್ತರುಗಳಿಗೂ ಕೊಟ್ಟರೆ ನಾವೂ ಬದುಕಬಹುದು.

ಯ ರ ಮ ರ ಸಿ

(H. T. ಮತ್ತು The Big Commission)

ಐನ್‌ಸ್ಟೀನ್ ಮಹಾಶಯ "There is nothing called 'at the same time'" ಅಂತಲೋ ಏನೋ ಹೇಳಿದಾನೆ. 'At the same time' ಅಲ್ಲದಿದ್ದರೆ ಸೈಮಲ್ಟೇನಿಯಿಟಿ ಅಂತಿರಬಹುದು. ಆದರೂ ಸಹಾ ನಮ್ಮ ಹೊಸ ದೊಡ್ಡಸಾಹೇಬರು ದೆಹಲಿ ಮೀಟಿಂಗಿನಲ್ಲಿ 'ಅಚ್ಛಾ ಮೈ ದೇಖ್ತೂಂ' ಅಂತ ಹೇಳುತ್ತಿದ್ದ ಕ್ಷಣದಲ್ಲಿ ನಾನು ಅವಳನ್ನು ಮತ್ತೆ ನೋಡಿದೆ.

ನಮ್ಮ ಹೊಸ ದೊಡ್ಡ ಸಾಹೇಬರೂ ಎಲೆಕ್ಟ್ರಿಕಲ್ ಇಸಮು. ಸೈಫನ್ ಫೇಲಾದುದಕ್ಕೆ ತೆಲುಗರ ದುರಾಶೆ ಕಾರಣವೆಂಬುದನ್ನರಿಯದ ಕನ್ನಡಿಗರ ಮೋಸವೇ ಕಾರಣವೆಂದು ಸಂಶಯಪಟ್ಟ ಮುಗ್ಧರು ಸೈಫನ್ ಫೇಲಾಗಿದೆಯೋ ಇಲ್ಲವೋ ಎಂಬ ಅನುಮಾನ ಅವರಿಗೆ. ಆಂಧ್ರರೇ ನೀರು ಕುಡಿಯಲಿ, ನನಗೆ ಸೀನಿಯಾರಿಟಿ ಲಿಸ್ಟಿನಲ್ಲಿ ಅನ್ಯಾಯವಾಗದಿರಲಿ ಎಂದು ಅವರು ಸತತವೂ ಪ್ರಾರ್ಥನೆ ಸಲ್ಲಿಸುತ್ತಾರೆ. 'ಸೈಫನ್ ಫೇಲಾದರೇನಂತೆ, ನೀರು ಇನ್ನೂರು ಕ್ಯೂಸೆಕ್ ಕಳಿಸಿರಿ' ಎಂದು ಅವರು ಸಂಬಂಧಿಸಿದ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಫೋನ್ ಮಾಡಿದರೆಂದೂ ಒಂದು ವದಂತಿ. ಎಗ್ಜಿಕ್ಯೂಟಿವ್ ಎಂಜಿನಿಯರು 'ಏಚ್ ಕಭಿ ನೈ ಹೋಸಕ್ತಾ' ಎಂದು ಉತ್ತರಿಸಿದರಂತೆ. 'ಆದೇನು ಬಂದರೂ ನೋಡಿಕೊಳ್ಳುತ್ತೇನೆ ನೀವು ಆರಾಮವಾಗಿ ಅಡ್ವಾಡಿರಿ' ಎಂದು ತಮ್ಮ ಕೈಕೆಳಗಿನವರಿಗೆ ಹೇಳಿದರಂತೆ.

ಆಂಧ್ರುಡುಗಳು ಕಾರನ್ನು ಭರ್ರೆನ್ನಿಸುತ್ತಾ ರಾಯಚೂರಿಗೆ ನುಗ್ಗಿದರು. ಸೈಫನ್ ರಿಪೇರಿ ಮಾಡಿ ನಮಗೆ ಹೆಚ್ಚು ನೀರು ಕೊಡಿ ಎಂದು ಗುಡುಗಿದರು. 'ರೀಪೇರಿಗೆ ದುಡ್ಡು ಬೇಕು' ಎಂದರು ನಮ್ಮವರು. 'ಹೌದು ಪುಗಸಟ್ಟೆ ಆಗುವುದಿಲ್ಲ. ಖರ್ಚು ಮಾಡಿ, ನಮಗೆ ನೀರು ಕೊಡಿ' ಎಂದರು, ಕುದುರೆಯನ್ನು ಗುರ್ರೆನ್ನುವವರು. 'ರೊಕ್ಕ ಬಿಟ್ಟಿ ಬಿದ್ದಿರುವುದಿಲ್ಲ ನೀವೂ ಅರ್ಧ ಕೊಡಿ' ಎಂದರು ನಮ್ಮವರು. 'ನಮಗೆ ನಾಗಾರ್ಜುನ ಸಾಗರ ಕಟ್ಟಲು ರೊಕ್ಕ ಬೇಕು. ಆದುದರಿಂದ ದುಡ್ಡು ಕೊಡಲು ಸಾಧ್ಯವಿಲ್ಲ' ಎಂದರು ಆಂಧ್ರರು. 'ಕೆವಲು ನಿಮ್ಮದು. ನಾವೇಕೆ ರೊಕ್ಕ ತೆತ್ತೇವು' ಎಂದರು ನಮ್ಮವರು.

ಮೇಲ್ನೋಡ ವ್ಯವಹಾರ ಅತ್ಯಂತ ನಯವಾದ ಭಾಷೆಯಲ್ಲೇ ಜರುಗಿತು. ಅದರ ಸಾರಾಂಶ ಮಾತ್ರ ಇಷ್ಟೇ.

ಅಂಧ್ರದ ಎಂಜಿನಿಯರುಗಳ ನಿಯೋಗವೊಂದನ್ನು ರಾಯಚೂರಿನಲ್ಲಿ ಅಡ್ಡಾಡಿಸಿದೆ. ಇದೆಲ್ಲಾ ಎಷ್ಟು ಸುಂದರ ಪ್ರದೇಶ! ಇಲ್ಲಿಂದ ನಾಲ್ಕಾರು ಮೈಲಿ ದೂರ ಹೋದರೆ ಹತ್ತಿಪ್ಪತ್ತು ಮರಗಳು ಕೂಡಾ ಇವೆ. ರಾಯಚೂರಿನಲ್ಲಿ ಒಂದೊಂದು ಬಾರಿ ಆಕಾಶದಲ್ಲಿ ಮೋಡಗಳೇ ಕಂಡುಬಿಡುತ್ತವೆ. ಈ ಕೋಟೆಯ ಬಳಿ ಗುಡ್ಡವಿದೆಯಲ್ಲ, ಅದರ ತುದಿಯಲ್ಲಿರುವುದು ಬೇವಿನ ಮರ!' ಎಂದು ಹೇಳಿದೆ.

'ಅದಕ್ಕೆ ಕಟ್ಟೆಯನ್ನು ಕಟ್ಟಿ ನೀರು ಹಾಕಿದವರು ನಾವೇ. ಅದರಿಂದ ರಾಯಚೂರು ಆಂಧ್ರಕ್ಕೆ ಸೇರಬೇಕು!' ಎಂದರವರು.

'ಹೌದು. ಅದರಿಂದಲೇ ಆ ಮರದ ಎಲೆ ಬಲು ಸಿಹಿ' ಎಂದೆ ನಾನು. ನಮ್ಮ ಆಫೀಸಿನ ಚಪ್ರಾಸಿಯಿಂದ ಅದನ್ನು ತರಿಸಿ ತಟ್ಟೆಗಳಲ್ಲಿಟ್ಟು ಕೊಟ್ಟೆ. ತಿಂದು ತಲೆದೂಗಿದ ಅವರು 'ಬಾಗುಂದಿ' 'ಬಾಗುಂದಿ' ಎಂದರು. ಎಂಥಾ ತೆಪರಗರು!

ಈ ನಡುವೆ ಒಂದು ದಿನ ಯರಮರಸಿಗೆ ನನ್ನ ಸ್ನೇಹಿತನೊಡನೆ ಬಸ್ಸಿನಲ್ಲಿ ಹೊರಟೆ. ಯರಮರಸಿ ಸದರನ್ ರೈಲ್ವೆಯ ಕೊನೆಯ ಸ್ಟೇಷನ್. ತುಂಗಭದ್ರಾ ಕೆನಾಲ್ ಡಿವಿಷನ್ನಿನ ಕೆಲವು ಆಫೀಸುಗಳು ಅಲ್ಲೇ ಇವೆ. ನಾನು ಅಲ್ಲಿಗೇ ಟ್ರೈನಿಂಗಿಗೆ ಹೋಗೋಣವೆಂದಿದ್ದೆ. ನನ್ನ ಸ್ನೇಹಿತ ಅಲ್ಲಿನ ಆಫೀಸಿನಲ್ಲೇ ಇರುವುದು. ಅವನ ಅಭಿಪ್ರಾಯದಂತೆ, ಭಗ್ನ ಹೃದಯಿಗಳೂ, ಕಾಲೇಜಿನಲ್ಲಿ ಓದದೇ ಡಿಗ್ರಿ ತೆಗೆದುಕೊಳ್ಳುವವರೂ ಅಲ್ಲಿರಬೇಕು. ಕೂಡುವುದು, ಕಳೆಯುವುದು, ಪಾಸ್ಟ್ ಪಾರ್ಟಿಸಿಪಲ್ ಎಂದರೇನು ಎನ್ನುವುದು ಗೊತ್ತಿಲ್ಲದ ಇಂಗ್ಲಿಷ್ ಇಷ್ಟಿದ್ದರೆ ಸಾಕು. ಯರಮರಸಿಯಲ್ಲಿ ಎಕ್ಸ್‌ಪರ್ಟ್ ಎಂಜಿನಿಯರೆಂದು ಮೆರೆಯಬಹುದು ಎಂಜಿನಿಯರೈಟಿಸ್ ರೋಗ ಹಿಡಿಯುವುದು ಹೇಗಿದ್ದರೂ ತಪ್ಪುವುದಿಲ್ಲ.

ಎಂಜಿನಿಯರೈಟಿಸ್ ಎಂದರೇನು ಎಂದು ಕೇಳಬಹುದು ನೀವು. ಆ ರೋಗ ಹಾಗೆ ಹೀಗೆ ಬರುವುದಿಲ್ಲ. ಬಿ.ಇ. ಡಿಗ್ರಿ ಇದ್ದರೆ ಮಾತ್ರ ಅದು ಬಂದೀತು. ಬಿ.ಇ.ಗೆ ಸೀಟು ಸಿಕ್ಕರೆ ಸಾಕು ಡಿಗ್ರಿ ಸಿಕ್ಕೇ ಸಿಕ್ಕುವುದು. ಬಿ.ಇ.ಯಲ್ಲಿ ವಿಷಯದ ಅಭ್ಯಾಸ ಬೇಕಿಲ್ಲ. ಪುಸ್ತಕದಲ್ಲಿರುವುದು ವಾಸ್ತವ ಪ್ರಪಂಚದಲ್ಲಿ ಅನುಪಯೋಗಕಾರಿ. ಒಂದು ಪಕ್ಷ ನನ್ನ ಹಾಗೆ ಚೆನ್ನಾಗಿ ಓದಿದವನೂ ಸಹಾ, ಡಿಪಾರ್ಟ್‌ಮೆಂಟಿಗೆ ಸೇರಿದ ಮೇಲೆ ತನ್ನ ತಿಳುವಳಿಕೆಯನ್ನು ಗಂಟು ಕಟ್ಟಿಡಲೇಬೇಕು. ಕಂಟ್ರ್ಯಾಕ್ಟರು ಗಂಟುಬೀಳುತ್ತಾನೆ. Specificationಗೆ ಅನುಸಾರವಾಗಿ ರಸ್ತೆಯನ್ನೋ ಕಾಲುವೆಯನ್ನೋ ಸೇತುವೆಯನ್ನೋ ಕಟ್ಟುವಾಗ 'ಫೈವ್ ಪರ್ಸೆಂಟ್' ಎಂದು ಕಂಟ್ರ್ಯಾಕ್ಟರು ಕಿವಿಯಲ್ಲಿ ಉಸಿರುತ್ತಾನೆ. ಸೈತಾನ 'ತೆಗೆದುಕೋ. ಬಂದ ರೊಕ್ಕ ಬಿಡಬೇಡ' ಎಂದು ಪ್ರೇರಿಸುತ್ತಾನೆ.

ಸರಿ ಎಂಜಿನಿಯರು ಉಲ್ಲನ್ ಪ್ಯಾಂಟ್, ಟೆರಿಲೀನ್ ಬುಷ್‌ಷರ್ಟ್, ಫ್ಲೆಕ್ಸ್ ಷೂಗಳನ್ನು ಡಜನ್‌ಗಟ್ಟಲೆ ಕೊಳ್ಳುತ್ತಾನೆ. ಹ್ಯಾಟ್, ಟೈ, ಗಾಗಲ್ಸ್, ಥರ್ಮಾಸ್

ಫ್ಲಾಸ್ಕ್‌ಗಳು ಗಂಟು ಬೀಳುತ್ತವೆ. ಬ್ಯಾಂಕ್ ಅಕೌಂಟು, ಕಳ್ಳಗಂಟು ಸಾವಿರಗಳಿಗೇರುತ್ತದೆ. ಜೀವನ, ಧರ್ಮ, ಕಲೆ, ಸತ್ಯ, ಕರ್ಮಗಳು ತಲೆಯ ಹತ್ತಿರವೇ ಸುಳಿಯುವುದಿಲ್ಲ. ಇನ್ಕ್ರಿಮೆಂಟು, ಪ್ರಮೋಷನ್ನು, ಸೀನಿಯರ್ ಆಫೀಸರುಗಳು, ಟ್ರಾನ್ಸ್‌ಫರ್ರು, ಕೂಲಿಗಾತಿಯರು, ಸಿನಿಮ ನಟಿಯರೇ ತಲೆಯಲ್ಲೆಲ್ಲಾ. ಮೈಯಲ್ಲಿ ನೆಣವಿರುವವರೆಗೂ ಹಾಗೇ.

ಹಿಂದಿಯೋದುತ್ತಿದ್ದ ಹುಡುಗಿಯೊಬ್ಬಳ ಅಪ್ಪನಿಗೆ ಇವನ ಮೇಲೆ ಕಣ್ಣು ಬೀಳುತ್ತದೆ. ವರದಕ್ಷಿಣೆ, ವಾಚು,ಗಳ ಆಸೆಗೆ ಅವಳನ್ನು ಮದುವೆಯಾಗಿ, ಫ್ರೀ ಕ್ವಾರ್ಟರಿನಲ್ಲೋ, ತೊಂಬತ್ತೈದು ರೂಪಾಯಿ ಬಾಡಿಗೆಯ ಮನೆಯಲ್ಲೋ, ಬರೀ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನಡಕಿ, ಹೆಂಡತಿಯ ಮೈಮೇಲೆ ನೈಲಾನ್ ಸೀರೆ, ಬ್ರೇಸಿಯರ್, ಇಮಿಟೇಷನ್ ಒಡವೆಗಳನ್ನು ಹೇರಿ, ಅವಳಿಗೆ ಉಷಾಮೆಷಿನ್, ಬ್ಯಾಡ್ಮಿಂಟನ್ ಬ್ಯಾಟ್‌ಗಳನ್ನು ಕೊಡಿಸಿ, ಅವಳಿಗೆ ಪರ್ಸನ್ನು ಕೊಟ್ಟು, ತರಕಾರಿ ಬುಟ್ಟಿ ಹಿಡಿದು ಅವಳ ಹಿಂದೆ ಮಾರ್ಕೆಟ್ಟಿಗೆ ತರಕಾರಿ ಖರೀದಿಗೆ ಹೋಗುತ್ತಾನೆ. ತಲೆ ಖಾಲಿ, ಮನಖಾಲಿ.

ಆಮೇಲೆ ಮಕ್ಕಳು, ಪೆರಾಂಬ್ಯುಲೇಟರ್, ಕಾನ್ವೆಂಟ್ ಸ್ಕೂಲು, ಎಂ.ಎಲ್.ಎ.ಗಳ ಆಶ್ರಯ ಇತ್ಯಾದಿ ಇತ್ಯಾದಿ ದೇಶದಲ್ಲಿ ಏನಾಗುತ್ತಿದೆ, ಏನು ಬೇಕು, ಏನು ಮಾಡೋಣ, ದೇವರು ನನ್ನನ್ನು ಹುಟ್ಟಿಸಿದ್ದಕ್ಕೆ ಏನು ಸಾರ್ಥಕ ಎಂಬ ಪ್ರಶ್ನೆ ಏಳಲಾರದು ನಲವತ್ತೈದರವರೆಗೂ.

ಅಲ್ಲಿಂದ ಮುಂದೆ ರಮಣ, ಅರವಿಂದ, ಸಾಯಿಬಾಬಾ, ರಾಯರು. 3001 ಇತ್ಯಾದಿ ಮಠಗಳ ಕಟ್ಟೆಗೆ ದಾಖಲು.

ಈ ರೋಗ ಪೀಡಿತರಾದ ಜನಗಳ ಠಾಣೆ ಯರಮರಸಿ. ಅಲ್ಲಿ 'ಫಕ್ತ' ಸಾಲು ಮರಗಳುಳ್ಳ ರಸ್ತೆಯಿದೆ ಎಂಬ ಅದ್ಭುತ ನನ್ನ ಸ್ನೇಹಿತನಿಂದ ತಿಳಿದು ಬಂತು. ಯರಮರಸಿ ಬಸ್‌ಸ್ಟ್ಯಾಂಡಿನಲ್ಲಿಳಿದೆ. ಕ್ಯೂ ಮುಂದೆ ಅವಳೇ ನಿಂತಿದ್ದಳು. ಅವಳನ್ನು ಕಂಡವನೇ ಎಚ್ಚರ ತಪ್ಪಿ ಬಿದ್ದೆ. ಹೃದಯದ ಮಿಡಿತ ನಿಮಿಷಕೆ ಒಂದೂನೂರಾ ಎಂಟ್ರಾಗಿತ್ತೋ ಏನೋ! ಜನಗಳೆಲ್ಲಾ ಇಳಿದರು. ಅವಳೂ ಅವಳ ಹಿಂದಿದ್ದ ವಿದ್ಯಾರ್ಥಿಗಳೂ ಬಸ್ಸು ಹತ್ತಿದರು. ನಾನು 'ಏಕೋ ಸಂಕಟವಾಗುತ್ತಿದೆ ರಾಯಚೂರಿಗೇ ಹಿಂತಿರುಗಿ ಹೋಗುತ್ತೇನೆ ಎಂದು ಹೇಳಿ ಮತ್ತೆ ಬಸ್ ಹತ್ತಿದೆ. ರಾಯಚೂರಿನಲ್ಲಿಳಿದೆ. ಅವಳು ಕಾಲೇಜಿಗೆ ಹೋದಳು. ನಾನು ಕಾಲೇಜು ಮೆಟ್ಟಿಲ ಮೇಲೇ ಕುಳಿತಿದ್ದೆ.

ನನ್ನ ಪರಿಸ್ಥಿತಿ ಹೀಗಾದರೆ, ಭಾರತದೇಶವೇನು ಹಿಂಜರಿಯುತ್ತದೆಯೇ? ಭಾವೈಕ್ಯತೆ ಪರಾಕಾಷ್ಠೆಯನ್ನು ಮುಟ್ಟಲು ಹೊರಟಿತ್ತು. ಗೋದಾವರಿ, ಕೃಷ್ಣಾ

ನದಿಗಳ ತಂಟೆಗೆ ಮರಾಠರೂ, ಕನ್ನಡಿಗರೂ ಕೈ ಜೋಡಿಸಿ ಒಂದಾದರು. ಆದರೆ ಆಂಧ್ರರು ಜಗ್ಗಲಿಲ್ಲ. ಸತ್ಯನಾರಾಯಣ ರಾಜುರವರು ಮತ್ತೆ ಹೇಳಿಕೆ ಕೊಟ್ಟರು. ಚವ್ಹಾಣರು, ಚನ್ನಬಸಪ್ಪನವರು ನೆಲಕುಟ್ಟಿ ಪಟ್ಟು ಹಾಕಿದರು. ಲೋಕಕ್ಕೇ ತಿಳಿದಂತೆ ಭಾರೀ ಆಯೋಗವೊಂದನ್ನು ನಿಯಮಿಸಿದರು. ಆಯೋಗದವರು ರಾಯ ಚೂರಿಗೂ ಬರಬೇಕೆಂದು ತೀರ್ಮಾನವಾಗಿತ್ತು.

'ಆಯೋಗ ಬರಲಿದೆ' ಎಂಬ ಕೂಗು ಎಲ್ಲ ಕಡೆ ಹರಡಿತು. ಹೈದರಾಬಾದ್ 'ನಮ್ಮ ಒಪ್ಪಿಗೆಯಿಲ್ಲದೆ ನಿಯಮಿತವಾದ ಆ ಯೋಗದ ತೀರ್ಪಿಗೆ ನಾವು ಬದ್ಧರಲ್ಲ' ಎಂಬ ಪ್ರತಿಕ್ರಿಯೆ ಕೊಟ್ಟಿತು. ಹಿಂದೆ ನೈಜಾಂ ಶಾಹಿಯ ಕೊನೆಗಾಲದಲ್ಲಿ ಖಾಲೀ ಬಂದೂಕೊಂದನ್ನು ಹೊತ್ತ, ಕಾಲ್ಮುರುಕ ಭಾರತೀಯ ಸೈನಿಕನೊಬ್ಬ ಬಂದಾಗ ರಾಯಚೂರಿನಲ್ಲಿ ರೋಮಾಂಚನವೆದ್ದಿತ್ತು. ಆ ನಂತರ ಬೇಸರವನ್ನು ಪರಿಹರಿಸಲು ಜಾತೀಯ ಗಲಭೆ ಹಚ್ಚಿಕೊಂಡು ಹೊಡೆದಾಡಿದರೂ ಜನ ಕಣ್ಣು ಮಿಟುಕಿಸಲಿಲ್ಲ. ಈಗಲೀಗ ಸಂಭ್ರಮದ ವಾತಾವರಣ.

'ತಗೋ ಆ ಫೈಲು'

'ಹಾಕು, ಎಷ್ಟಿಮೇಟು'

'ಕೊಡು ಈ ಕಾಲಂ'

'ಕಳಿಸು ಅವನ್ನ ಬೆಂಗಳೂರಿಗೆ'

'ಬರೀ, ಕಾಗಧ ಮದ್ರಾಸಿಗೆ'

'ದಬ್ಬು ಅವನ್ನ, ರಜಾ ಕೊಡಬೇಡ'

'ಅಡ್ವಾನ್ಸ್ T. A. ಡ್ರಾ ಮಾಡು'

'ಏನು ನೋಡ್ತೀ ದಬಾಯ್ಸು'

'ಹೊಸ ಸೂಟ್ ಹೊಲಿಸು'

'ಟೈ ಕೊಂಡುಕೋ'

'ಬೋರ್ ಹೊಡೆಯುತ್ತೆ, ಮುಚ್ಚು ಆಫೀಸ್ನ' ಎಂದು ಆಫೀಸುಗಳು ಮೊರೆಯಲಾರಂಭಿಸಿದವು.

'ಆ ಯೋಗದ ಮಾನ್ಯ ಸದಸ್ಯರನ್ನು ಅವರ ಸೊಟ್ಟಗಣ್ಣಿನ ಮೇಲಿರುವ ದಪ್ಪ ಕನ್ನಡಕದಿಂದ ಕಂಡು ಹಿಡಿಯಬಹುದು. ಮಾನ್ಯ ಸದಸ್ಯರನ್ನು ಯಾವಾ ಗಲೂ ಡನ್‌ಲಪಿಲ್ಲೋ ಕುರ್ಚಿ ಮೇಲೇ ಕುಳ್ಳಿರಿಸಬೇಕು. ಅವರು ಯಾವಾಗಲೂ ಬಿಸಿನೀರನ್ನು ಕುಡಿಯುವರು. ಅವರ ಕರ್ಚೀಫಿಗೆ ಕುನೇಗ ಪರ್‌ಫ್ಯೂಮ್ ಸಪ್ಲೈ

ಮಾಡಿದರೆ ಸಾಕೆಂದುಕೊಳ್ಳಬೇಡಿ. ಅವರು ಫಕತ್ ಚೋಂಗಿಯನ್ನು ತಿನ್ನುತ್ತಾರೆ ಅವರು ಮಲಗುವ ಕೋಣೆಯಲ್ಲಿ Pepsine ಮತ್ತು ಫ್ರೂಟ್‌ಸಾಲ್ಟ್ ಇರಬೇಕು. ಅವರು ಗ್ರೀನ್‌ಲೇಬಲ್ ಛಾವನ್ನೇ ಕುಡಿಯುತ್ತಾರೆ. (ಇನ್ನೇನನ್ನಾದರೂ ಕುಡಿಯ ಬೇಕೆಂದೆನ್ನಿಸಿದರೆ ಅದರ ವ್ಯವಸ್ಥೆಗೆ ಅವರು ಮೊದಲೇ ಹೇಳಿಬಿಡುತ್ತಾರೆ. ಅವರು ಬಿಚ್ಚುಮಾತಿನವರು) ಶ್ರೀಯುತರಿಗೆ ಭರತನಾಟ್ಯದ ಅರ್‍ರಂಗೇರ್‍ರಂ, ಕೂಚು ಪುಡಿ ಗಳನ್ನು ಕಂಡರೆ ಚಿಂಕಿ. ರಾಕ್ ಎನ್ ರೋಲ್ ಪ್ರಿಯರು. ಶ್ರೀಯುತರಿಗೆ ಪೀನಸಿಯಿದೆಯೆಂಬ ಅನುಮಾನವುಂಟು. ಶೀತವಾದಾಗ ಮಡ್ಡಿ ನಶ್ಯ ಕೊಂಚ ಕೊಟ್ಟರೆ ಸಾಕು. ಶ್ರೀಯುತರೊಡನೆ ಯಾರೂ ಹೊಟ್ಟೆನೋವಿನ ಮಾತನ್ನಾಡ ಬಾರದು. ಅಲ್ಲದೆ ಸಸ್ಯಾಹಾರವೇ ಮೇಲೆಂದು ಮರೆತೂ ಆಡಬಾರದು. ಗಾರ್ಡ್‌ನರ್, ವ್ಯಾಲೇಸ್ ಕಾದಂಬರಿಗಳನ್ನೂ, ರೇಸ್ ಪತ್ರಿಕೆಗಳನ್ನೂ ಕಂಡರೆ ಅವರಿಗೆ ಪ್ರಾಣ. ತಮಿಳು, ತೆಲುಗು, ಹಿಂದಿಗಳಲ್ಲಿ ಅವರೊಡನೆ ನೀವು ಮಾತಾಡಬಹುದು. ಆದರೆ ಅವರಿಗೆ ಇದಾವ ಭಾಷೆಯೂ ಬರುವುದಿಲ್ಲ'

ಈ ತರಹೆಯ ಮುನ್ನೆಚ್ಚರಿಕೆ ಪತ್ರಗಳು ಬರಲಾರಂಭಿಸಿದವು.

ನನಗಾದರೋ ನನ್ನ H. T. (ಹಾರ್ಟ್‌ಥ್ರಾಬ್)ಯದೇ ಚಿಂತೆ. ಮಾನ್ಯ ಆ ಯೋಗದ ಸದಸ್ಯರ ಅಭಿರುಚಿಗಳಿಗಿಂತ ಅವಳ ಹೆಸರು, ಅಭಿರುಚಿಗಳ ತಿಳುವಳಿಕೆ ನನಗೆ ಬೇಕಾಗಿತ್ತು.

ಜೀವನ ವಿಚಿತ್ರ. ಕೆಲವೇ ದಿನಗಳ ಹಿಂದೆ ನನ್ನ ಕಸುಬಿನಲ್ಲಿದ್ದ ಅಭಿರುಚಿ ಹಾರಿಹೋಯಿತು. ನನ್ನನ್ನು ಬಲೆಗೆ ಹಾಕಿಕೊಳ್ಳಲು ಹಾತೊರೆಯುತ್ತಿದ್ದ ಮಂದ ಗಮನೆ, ಲತಾಂಗಿ, ಹರಿಣಾಕ್ಷಿಯರಾರಲ್ಲೂ ನಾನು ಆಸಕ್ತಿಯನ್ನೇ ವಹಿಸಿರಲಿಲ್ಲ. ಇಲ್ಲಿ ಪರದೇಶಿಯಾಗಿ, ಬಿಕನಾಸಿಯಂತೆ ಕಾಲೇಜು ಮೆಟ್ಟಿಲ ಮೇಲೆ ಕುಳಿತಿದ್ದೆ.

ಕಾಲೇಜು ಬಿಟ್ಟ ಮೇಲೆ ಮತ್ತೆ ಅವಳನ್ನು ಹಿಂಬಾಲಿಸಿ ಬಸ್‌ಸ್ಟ್ಯಾಂಡಿಗೆ ಹೋದೆ ಬಸ್ ಹತ್ತಿ ಯರಮರಸಿಗೆ ಹೋದೆ. ಬಸ್ ಇಳಿಯುತ್ತಲೇ, ಅಚೆಕಡೆ ಯಿಂದ ರಾಯಚೂರಿಗೆ ಹೊರಟಿದ್ದ ಮಿತ್ರ ಸಿಕ್ಕ. 'ಏನೋ ಇದು ಅವಸ್ಥೆ' ಎಂದ. ನಾನು ತೆಪ್ಪಗಿದ್ದೆ.

ರಾಯಚೂರಿಗೆ ಅವನೊಡನೆ ಹಿಂತಿರುಗಿದೆ. ಅವಳು ಯಾರು ಎಂದು ತಿಳಿಯದಿದ್ದರೂ, ಅವಳು ಯಾವ ಊರಲ್ಲಿದ್ದಾಳೆ ಎಂದು ತಿಳಿಯಿತಲ್ಲ ಸಾಕು ಎಂದು ಸಮಾಧಾನಪಟ್ಟುಗೊಂಡೆ. ನದೀ ನೀರಿನ ತಂಟೆ ಬಗೆ ಹರಿಸಲು ಕೇಂದ್ರದವರು ಕಮಿಷನ್ ನೇಮಕಮಾಡಿದ್ದು ಎಷ್ಟು ದೊಡ್ಡ ಪ್ರಗತಿಯೋ, ಅಷ್ಟನ್ನೇ ನಾನೂ ಸಾಧಿಸಿದ ಹಾಗಾಯಿತೆಂದುಕೊಂಡು ಆದಿನ ಗೊರಕೆ ಹೊಡೆದೆ.

— ಅ. ರಾ. ಸೇ.

ಇದಕ್ಕೆ ಯಾರು ಹೆದರ್ತಾರೆ ಭಾವ

——:o:——

ಅಗಸ್ತ್ಯ ಮಹರ್ಷಿಯು ವಿಂಧ್ಯ ಪರ್ವತವನ್ನು ದಾಟಿಕೊಂಡು ಬಂದು ದಾಕ್ಷಿಣಾತ್ಯದ ಲೋಪಾಮುದ್ರೆಯನ್ನು ಮದುವೆಯಾದುದು ಎಲ್ಲರಿಗೂ ತಿಳಿದ ವಿಷಯ.

ಮದುವೆಯಾದ ಹೊಸದರಲ್ಲಿ ಒಂದು ಸಂಜೆ ಭಾವಮೈದ ಅಗಸ್ತ್ಯರನ್ನು "ಭಾವ, ಭಾವ! ಹವಾ ಕುಡಿಕೊಂಡು ಬರೋಣ. ನಮ್ಮ ದೇಶಾನೂ ನೋಡಿದ ಹಾಗೆ ಆಗುತ್ತೆ" ಎಂದು ಹೇಳಿ ಕರೆದುಕೊಂಡು ಹೋದ.

ಸ್ವಲ್ಪ ಹೊತ್ತಿನಲ್ಲಿ ಹಳ್ಳಿಯ ಅಂಚು ಸಿಕ್ಕಿತು. ಕಾಡು ಶುರುವಾಯ್ತು ದಂಡಕಾರಣ್ಯ ಅಲ್ಲವೇ?

ಅಲ್ಲೊಂದು ಮೂರು ಬಾರು ಉದ್ದ ಇದ್ದ, ತೊಡೆಗಾತ್ರದೇಹವಿದ್ದ ಹಾವೊಂದು ಹರಿದು ಹೋಗುತ್ತಿತ್ತು. ಹೆಬ್ಬಾವನ್ನು ಕಂಡೇ ಅಗಸ್ತ್ಯ ಬೆವರುಕ್ಕೆ ಶುರುಮಾಡಿದ. ಭಾವಮೈದುನನ್ನು ಕೇಳಿದ "ಇದು ಯಾವ ಜಾತಿ ಅಜಗರ?" ಅಂತ.

"ಇದೇ! ಇದನ್ನ ಹಂಚೀಕಡ್ಡಿ ಹಾವು ಅಂತ ಕರೀತೀವಿ ಇದಕ್ಕೆ ಯಾರು ಹೆದರ್ತಾರೆ?" ಅಂದಭಾವಮೈದ. "ದೊಡ್ಡ ಹಾವುಗಳನ್ನು ನೋಡಬೇಕಾದರೆ ಕಾಡಿನೊಳಕ್ಕೆ ಹಗಲಿನಲ್ಲಿ ಲಾಂದ್ರ ಹಿಡಿದುಕೊಂಡು ಹೋಗಬೇಕು. ಆಗ ಭಾರೀ ಅಜಗರಗಳನ್ನು ಕಾಣಬಹುದು" ಎಂದ ಭಾವಮೈದ.

ಮುಂದೆ ನಡೆದರು.

ಅಲ್ಲೊಂದು ತೊರೆ ಹರಿಯುತ್ತಿತ್ತು. ಆಚೆಕಡೆ ದಡದಲ್ಲಿ ಭಾರಿ ಹುಲಿಯೊಂದು ನೀರು ಕುಡಿಯುತ್ತಾ ಇತ್ತು. ಸುಮಾರು ಹದಿನಾರು ಹೆಜ್ಜೆ ಹುಲಿ. ಪಟ್ಟೆ ಪಟ್ಟೆಗಳೊಂದೊಂದೂ ಮೈಸೂರಿನ ಹಳೆ ಸಾಹುಕಾರರ ಸರಿಗೆ ರುಮಾಲಿನ ಜರತಾರಿ ಅಂಚಿನ ಅಗಲ ಇತ್ತು.

"ಆ ರಾಕ್ಷಸ ಪ್ರಾಣಿಯ ಹೆಸರೇನೂ? ಅಂದ ಅಗಸ್ತ್ಯ. ಆರ್ಯ ಅವ. ಇಂತಹ ಪ್ರಾಣಿಗಳನ್ನು ಕಂಡೇ ಇತ್ತಿಲ್ಲ. ಬೆದರಿ ಬಿಳುಚುಗೊಂಡಿದ್ದ ಕಿರುದನಿಯಲ್ಲಿ ಕೇಳಿದ.

ಅದೇ ! ಕಾಡು ಪಟ್ಟೆಬೆಕ್ಕು ಅದು. ಇದಕ್ಕೆ ಯಾರು ಹೆದರ್ತಾರೆ ಭಾವ" ಅಂದ ಭಾವ ಮೈದುನ. ಎರಡು ಬೆರಳನ್ನು ಬಾಯಿಗಿಟ್ಟುಕೊಂಡು ಒಂದು ತರಹ ಶಿಳ್ಳೆ ಹೊಡೆದ. ಹುಲಿ ಹೆದರಿ ಹಾರಿ ಛಂಗಿ ಧೌಡು ಓಡಿ ಕಣ್ಮರೆಯಾಯ್ತು.

ಇನ್ನು ಸ್ವಲ್ಪ ಮುಂದೆ ಹೋದರು.

ಅಲ್ಲೊಂದು ಪಕ್ಷಿಯು ಕೂತಿತ್ತು. ಎಮ್ಮೆಯೊಂದನ್ನು ತಿನ್ನುತ್ತಿತ್ತು. ಎಮ್ಮೆಯನ್ನು ಕುಕ್ಕುತ್ತಿದ್ದ ಆ ಪಕ್ಷಿಯ ಕೊಕ್ಕು ಒಂದು ಮೊಳ ಉದ್ದವಿತ್ತು. ಒಂದು ಸರ್ತಿ ಕುಕ್ಕಿ ಕಿತ್ತಾಗ ತೋಳುದ್ದ ಮಾಂಸ ಹರಿದು ಬರುತಿತ್ತು. ಅದನ್ನು ಗಬಕ್ಕಂತ ಬಾಯಿಗೆ ಹಾಕ್ಕೊಂಡು ನುಂಗುತ್ತಿತ್ತು.

"ನಮ್ಮ ಪುರಾಣದಲ್ಲಿ ವರ್ಣಿಸಿರುವ ವಿಮಾನಗಳಂತೇ ದಿಟವಾಗಿ ಜೀವಿಸಿರುವ ಈ ಪಕ್ಷಿಯ ಹೆಸರೇನು" ಎಂದ ತೆರೆದಬಾಯಿನ ಅಗಸ್ತ್ಯ. "ಆ ಗುಬ್ಬಚ್ಚೀನೇ? ಅದನ್ನ ಕಾಡು ಗುಬ್ಬಚ್ಚಿ ಅಂತಾರೆ. ಇದಕ್ಕೆ ಯಾರು ಹೆದರ್ತಾರೆ? ಇದೇ ಜಾತಿಯ ದೊಡ್ಡ ಗಿಡಗನ್ನ ನೋಡಬೇಕಾದರೆ ಕಾಡಿನ ಮಧ್ಯದಲ್ಲಿ ಬೆಟ್ಟಗಳ ತಪ್ಪಲಿನಲ್ಲಿ ಒಂದು ಕಿಷ್ಕಂದೆ ಇದೆ ಅಲ್ಲಿಗೆ ಹೋದರೆ ಭರ್ಜರಿ ಗಿಡಗಗಳನ್ನು ನೋಡಬಹುದು. ಸರ್‍ರ್ರಂತ ಅವೇನಾದರೂ ಬೇಗ ಹಾರಿದರೆ, ಸಣ್ಣಪುಟ್ಟ ಗಿಡಗಳೆಲ್ಲಾ ಬೇರು ಸಮೇತ ಕಿತ್ತು ಬೀಳುತ್ತವೆ ಒಂದೊಂದು ರೆಕ್ಕೆ ನಮ್ಮುದ್ದ ನಮ್ಮಗಲ ಇರುತ್ತೆ" ಎಂದ ಭಾವಮೈದುನ.

ಹೀಗೆ ಹೇಳುತ್ತಾ ಹತ್ತಿರದಲ್ಲಿದ್ದ ಬೊಂಬಿನ ಮೆಳೆಯಿಂದ ಒಂದು ಚಿಗುರನ್ನು ಕಿತ್ತು ಹಲ್ಲಿನಿಂದ ಚಪ್ಪಟಿಸಿ ಆ ಪಕ್ಷಿಯ ತಲೆಗೆ ಗುರಿ ಇಟ್ಟು ಎಸೆದ. ಪಕ್ಷಿಯ ಎಡಗಣ್ಣಿಗೆ ಅದು ಬಾರಿಸಿತು.

ಟಿಕೇಟ್ ಸಿಗದೆ ಇದ್ದ ನಮ್ಮ ಕಾಲದ ಅಭ್ಯರ್ಥಿ ಕೀರಲು ಧ್ವನಿಯಲ್ಲಿ ಲಬೋಲಬಿಸುವುದಿಲ್ಲವೇ?

ಆ ತರಹ ಕೀರಲು ಅಳುತ್ತಾ ಆ ಪಕ್ಷಿ ಎಮ್ಮೆಯ ಹೆಣವನ್ನು ಬಿಟ್ಟು ಹಾರಿ ಹೋಯಿತು.

* * * *

ಗಾಳಿ ಸೇವನೆ ಸಾಕು. ಮೈಯೆಲ್ಲಾ ಬೆವತಿದೆ. ಕೈಕಾಲೆಲ್ಲಾ ನಡುಗುತ್ತಿದೆ. ಎದೆ ಗುಡುಗುತ್ತಿದೆ. ಬೇಗ ಮನೆ ಸೇರಿಕೊಂಡರೆ ಸಾಕು ಎಂದು ಅನಿಸಿತು ಅಗಸ್ತ್ಯನಿಗೆ. ಅಗಸ್ತ್ಯರು ಮಹರ್ಷಿಗಳಲ್ಲವೇ? ಭಾವ ಮೈದುನನ ಎದುರಿಗೆ ತಮ್ಮ ಲೋಪ ದೋಷ ಭೀತಿ ಭಯಗಳನ್ನು ತೋರಿಸಿಕೊಳ್ಳುವಷ್ಟು ಹೆಡ್ಡರಲ್ಲ. ಅದಕ್ಕೇ ಆರ್ಯರು ಎಂದೂ ಮಾಡುವಂತೆ ವಿಚಾರ ಮಾಡುವ ಮನಸ್ಸಿನ ಜಾಣ್ಮೆಯನ್ನು

ಉಪಯೋಗಿಸಿಕೊಂಡು ಎಂದೂ ಇಲ್ಲದ ನಗುಮುಖವನ್ನು ನಟನಂತೆ ತೋರ್ಪಡಿಸುತ್ತ.

"ಭಾವಮೈದ! ಗಾಳಿಸೇವನೆ ಸಾಕು ಅಂತ ಅನ್ನಿಸುತ್ತೆ. ಕತ್ತಲಾಗುತ್ತ ಬಂತು ಹೊತ್ತಾಗಿ ಮನೆಗೆ ಹೋದರೆ, ನಿಮ್ಮಕ್ಕ ರೇಗಿಬಿದ್ದಾಳು. ಕಣ್ಣುಬೆಳಕಿರುವಾಗಲೇ ಹಿಂತಿರುಗಿ ಅಂದ್ರೆ ಅಂತ ಹೇಳಿದ್ದಳು.

"ಮನೆಗೆ ಹೋಗೋಣ" ಎಂದ.

* * * *

"ಅಕ್ಕ ಹಾಗೆ ಹೇಳಿದ್ದಳೇ" ಎಂದ ಭಾವಮೈದುನ, ಆಗ ಅವ ಬೆದರಿದ್ದ.

ಬೆವರುತ್ತಿದ್ದ. ಬಿಳುಚಿಕೊಂಡಿದ್ದ.

ಇದನ್ನು ಕಂಡ ಅಗಸ್ತ್ಯನಿಗೆ ರೆಕ್ಕೆ ಹೂಡಿದಂತೆ ಧೈರ್ಯ ಬಂದಿತು.

"ಹ್ಞಾ, ಕಣೋ! ಇಲ್ಲದೇ ಇದ್ದರೆ ಈ ದಂಡಕಾರಣ್ಯದಲ್ಲಿರೊ ಇನ್ನೂ ಕೆಲವು ಪ್ರಾಣಿಗಳನ್ನು ನೋಡೋಣ ಅಂತ ಆಸೆ ಇತ್ತು ನನಗೆ. ಆದರೆ ಇನ್ನೊಂದು ದಿವಸ ಬರೋಣ, ಈಗ ಮನೆಗೆ ಹೋಗೋಣ" ಎಂದ ಅಗಸ್ತ್ಯ.

"ಭಾವ, ಭಾವ," ಅಂತ ಶುರುಮಾಡುತ್ತಾ ಗದ್ಗದ ದನಿಯಲ್ಲಿ ಭಾವಮೈದುನ ಭಾವನ ಕಾಲಿಗೆ ಅಡ್ಡಬಿದ್ದ. "ಭಾವ, ಮನೆಗೆ ಹೋಗೋ ಹೊತ್ತಿಗೆ ಕತ್ತಲಾಗಿಬಿಡುತ್ತೆ. ಯಾಕೆ ಇಷ್ಟು ಹೊತ್ತಾಯ್ತು ಎಂದು ಅಕ್ಕ ಕೇಳಿದರೆ ನನ್ನ ತಪ್ಪಲ್ಲ ಅಂತ ಹೇಳಿ ಭಾವ.

ದಂಡಕಾರಣ್ಯದಲ್ಲಿ ಯಾವ ಪ್ರಾಣೀನಾದರೂ ಕತ್ತಲಲ್ಲಿ ಕೂಡ ಎದುರಿಸ್ತೀನಿ. ಆದರೆ ಭಾವ, ಮನೇಲಿ ಅಕ್ಕನ್ನ ಎದುರು ನಿಲ್ಲಲು ನಂಗೆ ತುಂಬಾ ಭಯ. ನೀವೇ ಕಾಪಾಡಬೇಕು" ಎಂದು ಭಾವಮೈದ ಹೇಳಿ ಮುಗಿಸಿದ.

ಆಗ ಅಗಸ್ತ್ಯ ಮಹರ್ಷಿಗಳು ಹೇಳಿದರು. ಆರ್ಯರಲ್ಲವೇ?

"ಅಕ್ಕನ ಕೋಪಕ್ಕೆ ನಿನ್ನನ್ನು ಸಿಕ್ಕಿಸುಲ್ಲ, ಭಾವಮೈದ, ನಿನ್ನ ಅಕ್ಕನಿಗಿಂತ ನಿನ್ನ ಮೇಲೆ ನನ್ನ ವಿಶ್ವಾಸ." ನನ್ನಲ್ಲಿರುವ ಲೋಪದೋಶಗಳೇ ನಿನ್ನ ಅಕ್ಕನಿಗೆ ಮುದ್ರಾ ಉಂಗುರದಂತೆ ಬಲಕೊಡಿಸುತ್ತವೆ. ಹಗೂರಾದ ಲೋಪಗಳನ್ನೇ ಆವಳೆದುರಿಗೆ ಪ್ರದರ್ಶಿಸಿ, ಅವಳು ನನ್ನನ್ನು ಹತೋಟಿಯಲ್ಲಿಟ್ಟಿದ್ದಾಳೆ ಅಂತ ಅನ್ನಿಸುವಂತೆ ಮಾಡುತ್ತೇನೆ. ಹೆದರಬೇಡ ಅಂತ ಹೇಳುತ್ತಾ ಹಿಂತಿರುಗಿದರು.

—ಪ್ರಸಾದ್.

ಗಾಂಪರ ಗುಂಪು

" ದಿ ಟವರ್ ಆಫ್ ಲಂಡನ್ "

ಕೈಲಿದ್ದ ಪಾತಾಳ ವಿದ್ಯುತ್ ಶಕಟ ಕೈಪಿಡಿಯಲ್ಲಿನ ನಕ್ಷೆಯನ್ನು ವೀಕ್ಷಿಸುತ್ತಿದ್ದ ಮಡೆಯ ಒಮ್ಮೆಲೆ ಕೇಕೆ ಹೊಡೆದ. ಗಟ್ಟಿಯಾಗಿ ಮಾತನಾಡಿದರೆ ಅಸಭ್ಯರೆಂದೆಲ್ಲಿ ತಿಳಿಯುವರೋ ಎಂಬ ಅಗ್ದಿ ಏಕ್‌ದಂ ಹೈಕ್ಲಾಸ್ ಅಂಗ್ರೇಜಿಯವಳಾದ ದೊರ್ಸಾನಿಯ ನಡುಮನೆ ನಡುಗಿ, ಅಡಿಗೆ ಮನೆಯಲ್ಲಿದ್ದ ದೊರ್ಸಾನಿ ಓಡಿಬಂದಳು-ಗುರು ಗಾಂಪರು ಸೋಪಾದ ಮೇಲೆ ಚಕ್ಕಮಕ್ಕ ಹಾಕಿ ಕೂತಿದ್ದರು-ಮಂಕ ಒಂಟಿಕಾಲಲ್ಲಿ ನಿಂತು ಆಗತಾನೆ ತನ್ನ ಊರಿಂದ ಬಂದ ಪ್ರಿಯೆಸಿ ವೆಂಕಟಲಕ್ಷ್ಮಿಯ ಪ್ರೇಮಪತ್ರ ಓದುತ್ತಿದ್ದ-ಮರುಳ ತನ್ನ ಪ್ರೇಮದ ಚಿಗಳಿಪುತ್ಥಳಿ ಗಂಗವ್ವನಿಂದೇಕೆ ಉತ್ತರ ಬರಲಿಲ್ಲ ಎಂದು ಚಿಂತಾಕ್ರಾಂತನಾಗಿ ಕಿಟಿಕಿಯಿಂದ ಲಿವೆಂಡರ್ ಗಿಡದ ಸೊಬಗನ್ನು ನೋಡುತ್ತಿದ್ದ. ಮಡ್ಡಿ ಕನ್ನಡಿ ಮುಂದೆ ನಿಂತು ಟೈ ಸರಿಮಾಡಿಕೊಳ್ಳುತ್ತಿದ್ದವನು ಈ ಮಡೆಯನ ಕೇಕೆಗೆ ಹೌಹಾರಿ ಅವನತ್ತ ತಿರುಗಿದ.

" ಗುರುಗಳೇ ಪಾತಾಳ ಶಕಟದಲ್ಲಿ ಟವರ್ ಆಫ್ ಲಂಡನ್ನಿಗೆ ಹೋಗಬೇಕಾದರೆ ಡಿಸ್ಟ್ರಿಕಟ್ ಲೈನು ಹಿಡಿದು ಹಾನ್ಸ್‌ಲೋ ಸ್ಟೇಷನ್ನಿಂದ ನೇರವಾಗಿ ಟವರ್‌ಹಿಲ್ ಸ್ಟೇಷನ್ನಿಗೆ ಹೋಗಬೇಕು-ಅಲ್ಲಿಂದ ಐದುನಿಮಿಷದ ದಾರಿ"-ಎಂದು ಅವತ್ತಿನ ಸಂದರ್ಶನದ ಸ್ಥಳವಾದ 'ಟವರ್ ಆಫ್ ಲಂಡನ್ನಿಗೆ' ಹೋಗುವ ದಾರಿಯನ್ನು ಅವನೇ ಸ್ವತಂತ್ರವಾಗಿ ಕಂಡುಹಿಡಿದಷ್ಟು ಸಂತೋಷವಾಗಿ ಕೇಕೆ ಹೊಡಿದಿದ್ದ.

" ಓ ಟವರ್ ಹಿಲ್ ಸ್ಟೇಷ ಧಾರಿ ನೋಡಿದೆಯಾ "

" ಹೌದು ದೊರ್ಸಾನಕ್ಕ "

" ಹಾಗಾದರೆ ಇವತ್ತಿನ ಕಾರ್ಯಕ್ರಮ ಆಗಲೇ ಸಿದ್ಧವಾಗಿ ಹೋಗಿದೇನ್ನು"

" ಓಹೋ....ನಿನ್ನೆ ರಾತ್ರಿ ನೀನು ದ್ರಾಕ್ಷಿಗೊಜ್ಜು ಬಡಿಸಿದಾಗ ಗುರುಗಳಿಗೆ ಹೇಳುತ್ತಿರಲಿಲ್ಲವೇ ? ಅದಕ್ಕೆ ನಾನು ತಯಾರಾಗಿರೋದು "

—ಗುರು ಗಾಂಪರು ಸೋಫಾದಿಂದ, ಎದ್ದು,

" ದೊರ್ಸಾನೀ ಹೊರಡುವ ಮುಂಚೆ ಸೊಗಸಾದ ಒಂದು ಲೋಟ ಕಾಫಿ ಆಗಬೇಕಲ್ಲಾ "

" ಈಗ ತಯಾರು ಮಾಡಿ ತರುವೆ "-ಎಂದು ದೊರ್ಸಾನಿ ಕಾಫಿ ಕಾಸಲು ಗ್ಯಾಸ್‌ಲೈಟ್ ಅನ್ನು ಹೊತ್ತಿಸಲು ಹೊರಟು ಹೋದಳು. ಎಲ್ಲರೂ ಕಾಫಿ ಕುಡಿದು ಲಂಡನ್ ಟವರಿಗೆ ಹೊರಡುವುದೆಂದು ತೀರ್ಮಾನಿಸಿದರು.

ಭಾರತದಿಂದ ವೆಂಕಟಲಕ್ಷ್ಮಿ "ಎಂದು ಬರುವಿರಿ-ನಿಮ್ಮ ಮುದ್ದು ಮುಖದ ಪ್ರೇಮಮಯ ಕಣ್ಣುಗಳಿಗೆ ಅಮೃತಾಂಜನ ಸವರಲು ನನ್ನ ಕೈಗಳು ಚಡಪಡಿಸುತ್ತಿವೆ" ಎಂದು ಬರೆದಿದ್ದಳು. ಮಂಕ ಭಾರತಭೂಮಿಯ ಮುಂದರಿಯದ ಈ ಹೆಣ್ಣುಮಗಳ ಪ್ರೀತಿಗೂ, ಮುಂದರಿದ ಇಂಗ್ಲೀಷ್ ಹುಡುಗಿಯರ ಪ್ರೇಮಕ್ಕೂ ಅಜಗಜಾಂತರವಿತ್ತು. ಇಲ್ಲಿ ಡೇಟ್ ಎಂದು ಒಂದು ತಾರೀಖು ಗೊತ್ತುಮಾಡಿಕೊಂಡು ಹುಡುಗ ಹುಡುಗಿಯರು ಒಂದು ಹೋಟಲೋ-ಕಡಲು ದಂಡೆಯೋ ಹೈಡ್‌ಪಾರ್ಕೋ-ಅಥವ ದೂರದ ವಿಹಾರಕೇಂದ್ರ ಬ್ಲಾಕ್‌ಪೂಲ್‌ಗೋ ಹೋಗಿ ಹಾಯಾಗಿ ಹರಟಿ-ತಿಂದು-ಕುಡಿದು-ತೇಗಿ-ತಮ್ಮ ಮಾತು-ಪ್ರೀತಿ-ಸ್ವಭಾವಗಳು ಗಂಡ ಹೆಂಡಿರಾಗಲು ಸಾಧ್ಯಮಾಡೀತೇ ಎಂದು ಒಬ್ಬೊಬ್ಬರನ್ನೂ ಅರ್ಥಮಾಡಿಕೊಳ್ಳುವ ಈ ಕಳ್ಳ ಕೂಡಾಣಿಕೆಗೆ 'DATING' ಎಂದು ಹೆಸರಿಟ್ಟು ಆಟವಾಡುವರು. ಕೊನೆಗೆ ಲಗ್ನದ ತನಕ ಇದು ಎಳೆದರೂ ಲಗ್ನವಾದಮೇಲೂ ಗಂಡನನ್ನು ಹೆಂಡತಿ ಬಿಡುವುದು ಬಹು ಸುಲಭ. ನಮ್ಮಲ್ಲಿ ಈ ಸೌಕರ್ಯ ಉಂಟೆ? ಒಮ್ಮೆ ಉರುಲು ಬಿದ್ದಂತೆ ಹೆಂಡ್ತಿ ಕೊರಳಿಗೆ ಬಿದ್ದರೆ ತೀರಿತು ಸತ್ತಾಗಲೇ ಬಿಡುಗಡೆ. ಅಲ್ಲದೆ-ತಾನೂ ವೆಂಕಟಲಕ್ಷ್ಮಿಯೂ ಹೀಗೆ ಡೇಟಿಂಗ್ ಹೋಗಲು ಸಾಧ್ಯವೇ ಎರಡು ಸಲ ಮನೆ ಮುಂದೆ ಸುಳಿದಾಡಿದರೆ ಆಗಲೇ ಆ ಕೇರಿಯವರು ಕೆಂಗಣ್ಣು ಬೀರಿ ಬಡಿದಟ್ಟುವರು. ಈ ವಿಷಯದಲ್ಲಿ ಬಹು ಹಿಂದಿದೆ ನಮ್ಮ ನಾಡು ಎಂದು ಚಿಂತನಮಂಥನದಲ್ಲಿ ಮುಳುಗಿದ್ದ ಮಂಕನಿಗೆ ಎಚ್ಚರವಾದದ್ದು "ಲೋ ಮಂಕ ನಡಿಯೋ ಆಗಲೇ ಗುರ್ಸ್ವಾನಕ್ಕ ಗುರುಗಳ ತೋಳಲ್ಲಿ ತೋಳು ಹಾಕಿ ಟವರ್ ಆಫ್ ಲಂಡನ್ನಿಗೆ ಹೊರಟಳು"-ಎಂದು ಮಡೆಯ ಎಚ್ಚರಿಸಿದಾಗಲೆ.

ಟವರ್ ಹಿಲ್ ರೈಲ್ವೆ ಸ್ಟೇಷನ್ ತಲುಪಿದಾಗ ಮುಂಜಾನೆ ಒಂಭತ್ತುವರೆ ಆಗಿತ್ತು.

"ದೊರ್ಸಾನೀ ಈ ಟವರ್ ಆಫ್ ಲಂಡನ್ನಿನಲ್ಲಿ ಏನು ವಿಶೇಷ?"-ಗಾಂಪ ರೊಡೆಯರ್.

"ಮೈ ಡಿಯರ್-ಇಲ್ಲಿಯೇ ಅನೇಕ ತಲೆಗಳನ್ನು ಕಡಿದುಹಾಕಿದ್ದು, ವಿಶೇಷವಾಗಿ ದೇಶದ್ರೋಹಿಗಳನ್ನ ಹಳೇ ಕಾಲದಲ್ಲಿ ಇಲ್ಲಿಯೇ ಕೊರಡಿನ ಮೇಲೆ ತಲೆ ಇರಿಸಿ ಗಂಡುಗೊಡಲಿಯಿಂದ ಕಚಕ್ ಎಂದು ಬಲಿ ಹುಯ್ಯುತ್ತಿದ್ದರು"

—ಗಾಂಪರ ಗುಂಪು ಗುಂಪಿಗೇ ಮೈ 'ಜುಂ' ಎಂದಿತು.

"ಗುರುಗಳೇ ವಾಪಸು ನಡೀರಿ"-ಎಂದ ಮರುಳ

"ಯಾಕಲೇ"

"ನಾವು ಎಲ್ಲಿ ಏನು ತಪ್ಪು ಮಾಡಿದ್ದೀವೋ ಆ ಗುರು ಗುಹೇಶ್ವರನೇ ಬಲ್ಲ-ಸುಮ್ಮನೆ ಒಳ್ಳೇಯವರ ಪ್ರಾಣ ಡಿಳ್ಳಿವಳಗೆ ಹೋತು ಅಂತ-ಎಲ್ಲಾ ಬಿಟ್ಟು ಈ ಲಂಡನ್ ಕೋಟಿಯೊಳಗೇಕೆ ಕತ್ತು ಕಡಿಸಿಕೊಳ್ಳಬೇಕು?"

—ಎಂದೆನ್ನುತ್ತಿರುವಂತೆಯೇ ರೋಮನರು ಕಟ್ಟಿಸಿದ ಕಾಲದಿಂದ ನಡೆದು ಬಂದ ದಾರಿಯಲ್ಲಿ ಮುಗಿಲೆತ್ತರದ ಕೋಟೆಯ ನಡುವೆ ನಾಲ್ಕೂ ಗೋಪುರಗಳು ಎದ್ದು ಕಂಡವು. "ಗೋವಿಂದಾ-ಗೋವಿಂದ" ಎಂದು ತಿರುಪತಿ ತಿಮ್ಮಪ್ಪನ ಬೆಟ್ಟದ ಗಾಳಿಗೋಪುರ ಕಂಡಾಗ ಅನ್ನುವಂತೆ ಇಲ್ಲಿ ಏನನ್ನೂ ಅನ್ನುವ ಹಾಗಿಲ್ಲ. ಅವತ್ತು ಶನಿವಾರ ಗೋಪುರದೊಳಗೆ ಹೋಗಲು ಏನೊಂದು ಕಾಸೂ ಕೊಡಬೇಕಾಗಿರಲಿಲ್ಲ.

ಮುಂದುಗಡೆಯೇ ಚಿತ್ರದುರ್ಗದ ರಂಗಯ್ಯನ ಬಾಗಿಲು ನಮೂನೆಯ ಒಳಮೈ ಉಳ್ಳ ದೊಡ್ಡ ಪ್ರವೇಶ ಬಾಗಿಲು ಇತ್ತು. ಅದರ ಮುಂದೆ ಇದ್ದ ಬೂತಿನಲ್ಲಿ ತಲೆಗಿಂತಾ ಭಾರವಾದ ಟಗರಿನ ಮೈಗೂದಲ ಟೋಪಿ ಹಾಕಿದ ಗಾರ್ಡ್ ಬಹು ಶಿಸ್ತಿನಿಂದ ಬಂದೂಕ ಹಿಡಿದು ನಿಂತಿದ್ದ. ಇವನ ಡ್ರೆಸ್ಸು ತಲೆ ತಲಾಂತರದಿಂದ ನಡೆದುಬಂದದ್ದಂತೆ. ಕೆಂಪು ಕೋಟು ಬಿಳಿಯ ಪಟ್ಟೆಯ ಬೆಲ್ಟು ಕಪ್ಪುನೀಲಿಯ ಪ್ಯಾಂಟು ಕೈಯಲ್ಲಿ ಭರ್ಜಿ ನೆಟ್ಟ ಬಂದೂಕು. ಹನ್ನೆರಡು ಹೆಜ್ಜೆ ಮುಂದೆ ಬಂದು ಧಟಕ್ಕನೆ ರೈಟ್ ಅಬೌಟರ್ನ್ ಮಾಡಿ ವಾಪಸ್ಸು ಸ್ವಸ್ಥಾನಕ್ಕೆ ತಿರುಗಿ ಶಿಲಾಮೂರ್ತಿ ಯಂತೆ ಸಟದು ಐದುಮಿನಿಟು ನಿಲ್ಲುತ್ತಿದ್ದ ಈ ವಿಶಿಷ್ಟ ಶಿಪಾಯಿಯನ್ನು ನೋಡು ತ್ತಲೇ ನಿಂತುಬಿಟ್ಟಿತು ಗಾಂಪರಗುಂಪು.

ಜನ ಗುಜಗುಜು ನಡೆದು ಹೋಗುತ್ತಿದ್ದರು. ಗುರುಗಳು ದೊರ್ಸಾನಿ ಜೊತೆ ಆ ಶಿಪಾಯಿಯ ಹಿನ್ನೆಲೆಯಲ್ಲಿ ಒಂದು ಫೋಟೋ ತೆಗಿಸಿಕೊಂಡರು. ಇಂತಹ ಫೋಟೋ ತೆಗೆಯಲು ಇಲ್ಲಿ ಅದೇ ಕೆಲಸದ ಫೋಟೋಗ್ರಾಫರುಗಳೂ ಇದ್ದರು. ಅವರ ಕೈಗೆ ಎರಡು ಷಿಲ್ಲಿಂಗ್ ಕುಕ್ಕಿ ನಿಮ್ಮ ವಿಳಾಸ ಬರೆದುಕೊಟ್ಟರೆ ಫೋಟೊ ತೆಗೆದು ತೊಳೆದು ಆ ವಿಳಾಸಕ್ಕೆ ಕಳಿಸುವರು. ಇಂಥವರು ಲಂಡನ್ನಿನ ಪ್ರೇಕ್ಷಣೀಯ ಪ್ರದೇಶಗಳಲ್ಲೆಲ್ಲಾ ಇದ್ದಾರೆ.

"ದೊರ್ಸಾನಕ್ಕಾ ಈ ಚಕ್ರಬಿಂಬನ ಕೋಟೆ ಯಾರು ಕಟ್ಟಿಸಿದ್ದು?"-ಮುಡ್ಡಿಯ ಪ್ರಶ್ನೆ.

"ಪ್ರಿಯ ಯುಲ್‌ಬ್ರೆನ್ನರನ ಶಿಷ್ಯರಿರಾ ...ಇದು ಮೊದಲು ವಿಲಿಯಂದಿಕಾನ್ ಕರರನಿಂದ ಕಟ್ಟಲ್ಪಟ್ಟಿತು. ಹಳೇ ಕಾಲದ ಕೋಟೆ-ರೋಮನರು ಇದನ್ನು ಮೊದಲು ಕಟ್ಟಿದರೆಂದೂ ಹೇಳುತ್ತಾರೆ."

"ಈ ಕೋಟೆಗಳ ವಿಷಯ ಯಾರು ಮೊದಲು ಕಟ್ಟಿದ್ದೊಂತ ಹೇಳೋದು ಕಷ್ಟ. ನಮ್ಮ ಚಿತ್ರದುರ್ಗದ ಏಳುಸುತ್ತಿನ ಕೋಟೆ ಮತ್ತೆ ತಿಮ್ಮಣ್ಣನಾಯ್ಕ ಕಟ್ಟಿಸಿದ್ದಂತೆ ..." ಗುರೂಜಿ.

"ಗುರುಗಳೇ ವೆಂಕಟಲಕ್ಷ್ಮಿ ಕಾಗದಾ ಬರೆದಿದ್ದಾಳೆ-ನಮ್ಮ ಮಠದ ವೈದ್ಯರಾದ ತಿಮ್ಮಣ್ಣ ಪಂಡಿತರಿಗೆ ಸಕತ್ ಖಾಯಿಲೆಯಂತೆ"

"ವೈದ್ಯನ ವ್ಯಾಧಿ....ನೀನು ಬಾಯಿಮುಚ್ಚು ಆಮೇಲೆ ಈ ಲಂಡನ್ ಟವರಿನ ಕಥೆ ಹೇಳೇ ಸಖೀ...." ಗುರ್.

" ಹಿಂದಿನಿಂದ ಪ್ರಾರಂಭಿಸಿದ ಈ ಕೋಟೆ ಸ್ವಷ್ಟರೂಪು ಕಂಡದ್ದು 1465ರಲ್ಲಿ IVನೇ ಎಡ್ವರ್ಡ್ ಕಾಲದಲ್ಲಿ-ರಾಜಮನೆತನದ ಅನೇಕಾನೇಕ ಮಹಾಪುರುಷರೂ-ರಾಜಕಾರಣಿಗಳೂ ಇದೇ ಟವರಿನಲ್ಲಿ ಖೈದಿಗಳಾಗಿದ್ದರು "

" ಗುರುಗಳೇ ನಮ್ಮ ಶ್ರೀರಂಗಪಟ್ಟಣದ ಕೋಟೆಯಲ್ಲೂ ಈ ಅಂಗ್ರೇಜಿಗಳನ್ನು ಟಿಪ್ಪು ಹಿಡಿದು ಹಾಕಿದ್ದ....ಹಾಗೇ ಇದೂವೆ ಅಲ್ಲವೆ?"-ಮರುಳನೆಂದ.

" ಹೌದು ಹೌದು ಹಳೇ ಕಾಲವೆಂದ ಮೇಲೆ ಶಿರಚ್ಛೇದನ ಖೈದು-ಪಲಾಯನ ಕೋಟೆ ಕೊತ್ತಲ ಇದ್ದೇ ಇರಬೇಕು ಇದರಲ್ಲಿ ಆಶ್ಚರ್ಯವೇನು?-ಇಂಗ್ಲೆಂಡಿನಲ್ಲಿರುವುದೆಲ್ಲಾ ಪ್ರೇಕ್ಷಣೀಯವೇ ಏನೋ ಎಂಬಂತೆ ಇಲ್ಲಿಗೆ ಬಂದ ಯಾತ್ರಾರ್ಥಿಗಳೆಲ್ಲಾ ಇವೆಲ್ಲಾ ನೋಡೋದರಲ್ಲಿ ಅರ್ಥವಿಲ್ಲ"

—ಎಂದು ಮಂಕ ಈ ಹಳೇ ಕಲ್ಲು ಕಟ್ಟಡ ನೋಡೋದರಲ್ಲಿ ಏನೂ ಪುರುಷಾರ್ಥವಿಲ್ಲ ಎಂಬಂತೆ ಹೇಳಿದ.

" ಮಂಕಾ ಹಾಗನ್ನಬಾರದು-ಹೋದಕಡೆಯಲ್ಲೆಲ್ಲಾ ಕಾಶಿ ವಿಶ್ವೇಶ್ವರನ ದರ್ಶನವೇ ಆಗಬೇಕು-ಗಂಗಾಸ್ನಾನವೇ ಆಗಬೇಕು ಅಂದರೆ ಆಗುತ್ತದೆಯೆ? ಇಲ್ಲಿ ನೋಡೋದು ಇಲ್ಲಿ ನೋಡಬೇಕು ಅಲ್ಲಿ ನೋಡೋದು ಅಲ್ಲಿ ನೋಡಬೇಕು ..."

—ಎಂದು ಅರ್ಥಪೂರ್ಣವಾಗಿ ದೊರ್ರಾನಿಯನ್ನು ನೋಡಿದರು ಈ ಮಾತಿಗೆ ಮರುಳ ' ಇಲ್ಲಿ ಇಂಗ್ಲೆಂಡಿನಲ್ಲಿ ನನ್ನ ಗಂಗೆಯನ್ನು ನೆನೆಯುವುದೇ ಗಂಗಾಸ್ನಾನ ' ಎಂದೆಂದುಕೊಂಡು, ಟವರ್ ಆಫ್ ಲಂಡನ್ ಕೋಟೆಯ ಒಳಭಾಗವನ್ನು ನೋಡಲು ಮುಂದು ಮುಂದು ಹೊರಟ ಗುರುಗಳನ್ನು ಶಿಷ್ಯರನ್ನೂ ಇವನೂ ಹೋಗಿ ಸೇರಿಕೊಂಡ.

" ಈ ಟವರ್ರು ಥೇಮ್ಸ್‌ನದೀ ದಡದಲ್ಲೇ ಇದೆ. ಪ್ರಖ್ಯಾತವಾದ ಟವರ್‌ಬ್ರಿಡ್ಜ್ ಇದರ ಬಳಿಯೇ ಇರೋದು. ಈ ಟವರ್‌ಬ್ರಿಡ್ಜು ಟವರ್ ಆಫ್ ಲಂಡನ್ ನೋಡಲು ಬರುವವರೆಲ್ಲಾ ನೋಡೇ ಹೋಗುವರು. 1886-94ರ ವರೆಗಿನ ಅವಧಿಯಲ್ಲಿ 800,000 ಪೌಂಡುಗಳ ವೆಚ್ಚದಲ್ಲಿ ಕಟ್ಟಿದರು. ಥೇಮ್ಸ್ ನದಿಯ ಮೇಲಿನ ಹಡಗುಗಳು ಇದರ ಕೆಳಗೆ ಹೋಗಲು ಆಗುವುದಿಲ್ಲ"

" ಕೆಳಗೆ ಹೋಗದಿದ್ದರೆ-ಈ ರಸ್ತೆಯಲ್ಲೇ ಹಡಗು ಬರಬಾರದು"

" ಹಡಗಿಗೆ ಅಡ್ಡದಾಗಿ ಸೇತುವೆ ಕಟ್ಟುವ ಅವಶ್ಯಕತೆ ಏನಿತ್ತು"

" ಹಾಗಲ್ಲ ಮಡೆಯಾ...." ಎಂದು ದೊರ್ರಾನಿ ಟವರ್‌ಬ್ರಿಡ್ಜಿನ ಬಗ್ಗೆ ಹೆಮ್ಮೆಯಿಂದ ಹೇಳತೊಡಗಿದಳು-" ಹೈಡ್ರಾಲಿಕ್ ಶಕ್ತಿಯ ಮೂಲಕ ಈ ಸೇತುವೆ ಮಧ್ಯದಲ್ಲಿ ಬಿಡಿಸಿಕೊಂಡು ಮೆಲ್ಲಗೆ ಮೇಲೆ ಸರಿದು ಹಡಗು ಹಾದು ಹೋಗಲು ದಾರಿ ಮಾಡಿ ಕೊಡುತ್ತದೆ-ಸಾವಿರ ಟನ್ನು ಭಾರದ ಫಳಿಕೆಗಳು ಒಂದೇ ನಿಮಿಷದಲ್ಲಿ ಬಾಯಿ ತೆಗೆದಂತೆ ಬಿಟ್ಟುಕೊಂಡು ಬಿಡುತ್ತವೆ....ದಿನಕ್ಕೆ ಡಜನ್ನು ಬಾರಿ ಹೀಗೆ ಹಡಗಿಗೆ ದಾರಿ ಬಿಡುತ್ತದೆ-ಒಮ್ಮೆಯೂ ಕೈಕೊಟ್ಟಿಲ್ಲ-ಈ ಟವರ್ ಸೇತುವೆಯ ಮೇಲೆ

ದಿನ 10,000 ಬಸ್ಸು ಕಾರು ಲಾರಿಗಳು ಓಡಾಡುತ್ತವೆ....ಹೇಗಿದೆ ನಮ್ಮ ಎಂಜಿನಿಯರುಗಳ ಸಾಹಸ!!...."

" ಗುರುಗಳೇ ಸೇತುವೆ ನಡುವೆ ಲಾರಿ ಬಸ್ಸು ಇದ್ದಾಗ ಹಡಗಿಗೆ ದಾರಿಬಿಡಲು ಫಳಿಗೆ ಬಾಯಿ ಬಿಟ್ಟರೆ ದೇವರೇ ಗತಿ-" ಮರಳ.

" ಇದೇನು ಮಹಾ ನಮ್ಮೂರ ಸೇತುವೆಗೇನೂ ರೈಲು ಹಾಯ್ದು ಹೋದ ತಕ್ಷಣ ಬಾಯಿಬಿಟ್ಟು-ಕಣ್ಣು ಮುಚ್ಚಿಕೊಳ್ಳೊಲ್ವೆ ..." ಮಂಕ.

" ಸರಿ ಲಂಡನ್ ಟವರ್ ಮೇಲೆ ನಿಂತು-ಟವರ್ ಬ್ರಿಡ್ಜಿನ ಚರಿತ್ರೆ ಕೇಳುವುದು ಸರಿಯಲ್ಲ-ಪ್ರಿಯಳೇ ಈ ಟವರ್ ಆಫ್ ಲಂಡನ್ನಿನ ವಿಚಾರ ಹೇಳು ..."

" ಇದರ ಚರಿತ್ರೆ ಬರೆದರೆ ಸಾವಿರ ಪುಟ....ಈ ಕೋಟೆಯ ಕಲ್ಲುಗಳಿಗೆ ಬಾಯಿ ಇದ್ದಿದ್ದರೆ ಅವುಕಂಡ ರಕ್ತಪಾತ-ರಾಜ ಪ್ರಣಯಿಗಳ ಶಿರಚ್ಛೇದನದ ಕಥೆ ಹೇಳುತ್ತಿದ್ದುವೇನೋ....ನೋಡಿ ಈ ಕೋಟೆಯಲ್ಲಿ ರಾಜಮನೆತನದ ಅನೇಕ ಪ್ರೇಮಕಥೆಗಳಿಗೆ ಕಾರಣರನ್ನು ಕೊರಡಿನ ಮೇಲೆ ತಲೆ ಇರಿಸಿ ಗಂಡುಗೊಡಲಿಯಿಂದ ತುಂಡರಿಸಿದ್ದಾರೆ. ರಾಜಲಾಂಛನಗಳಾದ ರಾಜದಂಡ-ಕಿರೀಟ-ಇತ್ಯಾದಿಗಳನ್ನು ಇಲ್ಲೇ ವೇಕ್‌ಫೀಲ್ಡ್ ಟವರ್ ಎಂಬ ವಿಭಾಗದಲ್ಲಿರಿಸಿದ್ದಾರೆ ...ಇಂಗ್ಲೆಂಡೂ ಕ್ರಾಮ್‌ವೆಲ್ ಎಂಬ ಸರ್ವಾಧಿಕಾರಿಯ ಆಡಳಿತದಲ್ಲಿ ಕೊಂಚ ಕಾಲ ಇತ್ತಲ್ಲವೆ? ಆರನೇ ಶತಮಾನದ ಎಲ್ಲ ರಾಜಾಭರಣ ಕಿರೀಟ ಕಂಠೀಹಾರಗಳನ್ನೂ ಈ ಕ್ರಾಮವೆಲ್ ಕರಗಿಸಿ ಚಿನ್ನದ ಗಟ್ಟಿ ಮಾಡಿದ ಇಲ್ಲವೆ ಮಾರಿ ಹಣ ಮಾಡಿದ. 1660ರಲ್ಲಿ ಮತ್ತೆ ರಾಜಮನೆತನದವರು ಸಿಂಹಾಸನ ಏರಿದ ಮೇಲೆ ಈ ಕಿರೀಟಗಳನ್ನು ಮಾಡಿಸಿದರು"-ಎಂದೆನ್ನುತ್ತಾ ರಾಜಾಭರಣಗಳನ್ನು ಇರಿಸಿದ ಛತ್ರೀರಿಗೆ ಹೊಕ್ಕರು. ಅಲ್ಲಿಗೆ ಹೋಗಲು ಅರ್ಧ ಶಿಲಿಂಗು ತೆರಬೇಕಾಯ್ತು. ಗುರು ಆರ್ಥಿಕ ಪರಿಸ್ಥಿತಿಯ ಪೂರ್ಣ ಅರಿವುಳ್ಳ ದೊರ್ಸಾನಿಯೇ ಎಲ್ಲರಿಗೂ ಟಿಕೆಟ್ಟು ಕೊಂಡುಕೊಂಡಳು. ಧನಕನಕಾದಿಗಳನ್ನು ಅಷ್ಟಾಗಿ ಲೆಕ್ಕಿಸದ-ಅದಕ್ಕಾಗಿ ವಿಶೇಷ ಮಾನ್ಯತೆ ಕೊಡದ ಈ ಸನ್ಯಾಸಿ ತಂಡ (ಅವು ಇಲ್ಲದ್ದರಿಂದಲೇ ಸನ್ಯಾಸಿಗಳಾದರೆಂದು ಹೇಳುವುದುಂಟು) ಬ್ರಿಟನ್ ರಾಜ-ರಾಣಿಯರ ಶಿರಾಭರಣ-ಪಟ್ಟದ ಕತ್ತಿಯ ಮಣಿಕರಣಿಕೆಗಳನ್ನು ನೋಡಲು ಒಬ್ಬರ ಹಿಂದೊಬ್ಬರು ಕ್ಯೂನಲ್ಲಿ ಹೋದರು.

—ಗಾಜಿನ ಪೆಟ್ಟಿಗೆಗಳಲ್ಲಿ ಆಕರ್ಷಕವಾಗಿ ಪ್ರದರ್ಶಿಸಿದ ಈ ದಿವ್ಯಾಭರಣಗಳು ಗಾಂಪರೊಡೆಯರಿಗೆ ಶಿಷ್ಯರಿಗೆ 'ಇದೇನು ಮಹಾ' ಎಂದೇ ಎನಿಸಿತು. "ಗುರುಗಳೇ ನಮ್ಮ ತಿರುಪತಿ ತಿಮ್ಮಪ್ಪನಿಗೆ ಹಾಕಿರೊ ಒಂದು ಕಿರೀಟ-ಒಂದು ವಜ್ರಕವಚದ ಚಲುವು ಈ ಎಲ್ಲ ಕಿರೀಟಗಳನ್ನು ಕೂಡಿಸಿದರೂ ಇಲ್ಲವಲ್ಲಾ" ಎಂದು ಮಡ್ಡಿ ಸೊಟ್ಟ ಮೂತಿ ಮಾಡಿದ. ಆದರೆ ಅಲ್ಲಿ ಇಂತಿಂಥವು ಈ ರಾಜರ ಕಿರೀಟ ಇವು ಈ ಕಾಲದಲ್ಲಿ ಹೀಗೆ ಇಲ್ಲಿಗೆ ಬಂತು ಎಂದು ವಿವರಣೆ ಕೊಡುತ್ತಿದ್ದ ಒಬ್ಬಾತ "ಇದು ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ತಮ್ಮ ಧರ್ಮಪತ್ನಿ ಇಂಗ್ಲೆಂಡ್ ರಾಣಿ ಎಲಿಜಬತ್ ಅವರು

ಧರಿಸಿದ ಕಿರೀಟ-ಅದರ ಮಧ್ಯದಲ್ಲಿ ಶೋಭಿಸುತ್ತಿರುವ ದೊಡ್ಡ ವಜ್ರವಿದೆಯಲ್ಲಾ ಅದೇ 'ಕೋಹಿನೂರ್' ವಜ್ರ ಇಂಡಿಯಾದಿಂದ ಬಂದದ್ದು"-ಎಂದ. ಗಾಂಪರ ಗುಂಪು ಒಬ್ಬರನ್ನೊಬ್ಬರು ನೋಡಿಕೊಂಡಿತು. ತಮ್ಮ ದೇಶದ ಭಾರೀ ವಜ್ರ ಈ ಟವರ್ ಆಫ್ ಲಂಡನ್ನಿನ ಬತೇರಿಯಲ್ಲಿ ಕೂತು ಕೊಳೆಯುತ್ತಿದೆಯಲ್ಲಾ ಎಂದು ಕ್ಷಣಕಾಲ ವ್ಯಥೆಪಟ್ಟರು.

"ಗುರುಗಳೇ ನಾವು ಸಾಮೂಹಿಕವಾಗಿ ಪಾರ್ಲಿಮೆಂಟ್ ಭವನಕ್ಕೆ ನುಗ್ಗಿ ಈ ಕೋಹಿನೂರು ವಜ್ರ ನಮ್ಮದು ಸ್ವಾತಂತ್ರ್ಯ ಕೊಟ್ಟ ಬ್ರಿಟಿಷರೇ ಈ ವಜ್ರಕೊಡಿ-ಎಂದು ಸತ್ಯಾಗ್ರಹ ಹೂಡೋಣವೇ?"-ಎಂದ ಮಂಕ. ಆದರೆ ಗುರುಗಳು ದೊಡ್ಡಾನಿಯನ್ನು ನೋಡಿ "ಪ್ರಿಯೇ ಈ ಕೋಹಿನೂರ್ ವಜ್ರದ ವಿಚಾರ ಇವನಿಗೆ ಇನ್ನೂ ತಿಳಿದಿದೆಯೇ ಕೇಳಿನೋಡು"-ಎಂದಾಗ ಆ ತಿಳಿ ಹೇಳುವ ಗೈಡು ಗಂಟಲು ಸರಿಪಡಿಸಿಕೊಂಡು ಹೇಳತೊಡಗಿದ,

"ಎಲ್ಲೈ ಯಾತ್ರಿಕರೇ ಕೇಳಿ....ಈ ಕೋಹಿನೂರ್ ವಜ್ರ ಮೊದಲಿಗೆ ಗೊಲ್ಕೊಂಡದ ಗಣಿಯಲ್ಲಿ ಸಿಕ್ಕಿದ್ದಂತೆ-ಪುರಾಣದ ಕಾಲದಲ್ಲಿ ಇದು ಪ್ರಸಿದ್ಧ ಯೋಧನಾದ ಕರ್ಣನು ಧರಿಸುತ್ತಿದ್ದನೆಂದು ಪ್ರತೀತಿ. ಹೀಗೆ ಇದು ಕೈಯಿಂದ ಕೈ ಬದಲಿಸುತ್ತಾ ಬಾಬರ್‌ನ ಕೈಗೆ ಬಂದದ್ದು 1526ರಲ್ಲಿ. ಇದರ ತೂಕ ಮೊದಲಿಗೆ 793 ಕ್ಯಾರೆಟ್‌ಗಳಿದ್ದುವಂತೆ ಅಡ್ಡಕಸುಬಿ ಕೆಲಸಗಾರನ ಕೈಗೆ ಸಿಕ್ಕು 280 ಕ್ಯಾರೆಟ್‌ಗಳ ತೂಕದ ವಜ್ರವಾಯಿತಂತೆ. 1739ರಲ್ಲಿ ನಾದಿರ್‌ಷಾನ ಬಳಿ ಬಂತು. ಈ ನಾದಿರ್ ಷಹನೇ ಇದಕ್ಕೆ ಕೋಹಿನೂರ್ ಎಂದು ಹೆಸರಿಟ್ಟುದು ಅನಂತರ ಇದು ರಣಜಿತ್‌ಸಿಂಗನ ಹತ್ತಿರ ಬಂತು. 1849ರಲ್ಲಿ ಪಂಜಾಬು ಬ್ರಿಟಿಷ್ ಕುಂಪಣಿಗೆ ಸೇರಿದಾಗ ಇದು ನಮ್ಮ ಬಳಿ ಬಂತು. ಹೀಗೆ ನೋಡಿ ಕಡೆಗೆ ಬ್ರಿಟಿಷ್ ರಾಣಿಯ ಕಿರೀಟದಲ್ಲಿ ಜಾಗ ದೊರಕಿಸಿ ಶೋಭಿಸುತ್ತಿದೆ"

—ಎಂದು ಕೋಹಿನೂರ್ ವಜ್ರದ ಚರಿತ್ರೆಯನ್ನೇ ವದರಿಬಿಟ್ಟ ಆ ಭೂಪ.

"ಗುರುಗಳೇ ನಮ್ಮ ರಾಜಧಾನಿ ದೆಹಲಿ ಅಶೋಕಸ್ತಂಭದ ಸಿಂಹದ ಹಣೆ ಮೇಲೆ ಮೆರಿಯೋ ವಜ್ರ ಈ ಹಳೇ ಬತೇರಿಯ ಗಾಜಿನ ಗೂಡಲ್ಲಿ ಕೊಳೀತಾ ಇದೆಯಲ್ಲಾ"-ಎಂದು ಹಲ್ಲುಮಸೆದ ಮಡ್ಡಿ. ರತ್ನಖಚಿತವಾದ ರಾಜದಂಡ-ಕತ್ತಿ-ಬಂಗಾರದ ತಟ್ಟೆ-ಅನೇಕ ರಾಜರುಗಳ ವಜ್ರಾಭರಣಗಳ ಸಾಲು ಸಾಲನ್ನೇ ನೋಡಿ-ಚಿನಿವಾರ್ರ ಕಟ್ಟೆಯನ್ನು ನೋಡಿ ಸಂತೋಷ ಪಡುವ ಕಡುಬಡವರಂತೆ ಹೊರಬಂದಿತು ಗಾಂಪರಗುಂಪು.

ಅಲ್ಲಿಂದ ಮುಂತೆ "ಆರ್ಮರಿ"-ಎಂದರೆ ಹಿಂದಿನ ಕಾಲದಲ್ಲಿ ಯುದ್ಧ ಸಮಯದಲ್ಲಿ ಉಪಯೋಗಿಸುತ್ತಿದ್ದ ಉಕ್ಕಿನ ಕವಚ-ಭರ್ಜಿ-ಈಟಿ-ಹಳೇ ಬಂದೂಕುಗಳು-ಕುದುರೆಗಳು ಧರಿಸುವ ಉಕ್ಕಿನ ಕವಚ-ಮುಖವಾಡ ಒಂದೆ ಎರಡೆ ಇಂಗ್ಲೆಂಡ್ ಆಳಿದ ಮೊದಲರಾಜನಿಂದಲೂ ಈ ಯುದ್ಧ ಪರಿಕರಣಗಳು ಸೇರುತ್ತ ಬಂದಿದೆ.

" ಗುರುಗಳಿಂದ ಬೈಗಳನ್ನು ತಿನ್ನುವ ಸಮಯದಲ್ಲಿ ಇಂತ ಉಕ್ಕಿನ ಕವಚದಲ್ಲಿ ಹೊಕ್ಕು ಅವಿತುಕೊಂಡರೆ ಎಷ್ಟು ಚೆನ್ನ"–ಎಂದು ಮಡೆಯು ಹೇಳಿದ.

" ನಮ್ಮ ಮಠದ ಕುದುರೆಗೆ ಇಂಥಾ ಉಕ್ಕಿನ ಕವಚ ತೊಡಿಸಿದರೆ ಥಳಿಸಿದರೂ ನೋವಾಗೊಲ್ಲ"–ಎಂದ ಮಡ್ಡಿ.

" ಸರಿ-ಗುರುಗಳ ಭಾರಕ್ಕೇ ಬೆನ್ನು ಬಿಲ್ಲಿನಂತೆ ಬಗ್ಗೊ ಆ ಕುದುರೆಗೆ ಈ ಉಕ್ಕಿನ ಕವಚ ಹೇರಿದರೆ ಭಾರಕ್ಕೆ ಜಜ್ಜಿ ಸತ್ತು ಹೋಗತ್ತಷ್ಟೆ...." ಎಂದು ಮಂಕ ಕುಚೇಷ್ಟೆ ಮಾಡುತ್ತಾ ಕಾಲದಿಂದ ಕಾಲಕ್ಕೆ ಕೊಲ್ಲುವ ಸಾಧನಗಳನ್ನು ಉತ್ತಮ ಪಡಿಸಿ ಕೊಂಡೇ ಬಂದು ಇಂದಿನ ಆಟಂಬಾಂಬ್ ತನಕ ಬಂದ ಮಾನವನ ಮೌಢ್ಯಕ್ಕಾಗಿ ಮರುಗುತ್ತಾ ನೆಡೆದಿದ್ದರು.

" ಈ ಲಂಡರ್ನ ಟವರ್ರಿನಲ್ಲಿ ಅನೇಕ ರಾಜ-ರಾಣಿಯರು ಸೆರೆಯಾಳುಗಳಾಗಿ ಬಿದ್ದಿದ್ದರು-ಮೊದಲನೆ ಎಲಿಜಬತ್ ರಾಣಿ-ಸರ್ ವಾಲ್ಟರ್ ರ್‍ಯಾಲೆ-ಸರ್ ಥಾಮಸ್ ಮೋರ್-ಆನಿಬೊಲೀನ್-ಥಾಮಸ್ ಕ್ರಾಮ್‌ವೆಲ್–ಇತ್ಯಾದಿ ಇತ್ಯಾದಿ ಘಟಾನು ಘಟಿಗಳು ಇಲ್ಲಿ ಕೊಳೆ ಬಿದ್ದಿದ್ದರು "

—ಎಂದು ಅದರ ಹಿರಿಮೆಯನ್ನು ಹೊಗಳಿದ ಒಬ್ಬ ಗೈಡು " ಇದು ನೋಡಿ 'Tower ಗ್ರೀನ್' ಎಂಬ ಜಾಗ ಬಹು ಹೆಸರಾದದ್ದು. ಬಲಿ ಹುಯ್ಯುವ ಕೊರಡು ಕತ್ತು ಕತ್ತರಿಸುವ ಗಂಡುಗೊಡಲಿಯ ಸಹಾಯದಿಂದ ರಾಜಾಜ್ಞೆಯ ಮೇಲೆ ಕತ್ತು ಕತ್ತರಿಸಿದ ಜಾಗ...."

ಗುರು ಶಿಷ್ಯರೂ ಉಗುಳು ನುಂಗಿ ಕತ್ತು ಸವರಿಕೊಂಡರು ಭಯಂಕರ ಆ ದೃಶ್ಯವನ್ನು ಊಹಿಸಿಕೊಂಡೇ ನಡುಗಿದರು.

" ಲಾರ್ಡ್ ಹೇಸ್ಟಿಂಗ್ಸ್ 1483 ರಲ್ಲಿ ಇಲ್ಲಿ ಕತ್ತರಿಸಲ್ಪಟ್ಟ "

" ಇಂಡಿಯಾದ ಯಾತ್ರಿಕರೇ....ರಾಣಿ ಆನಿಬೊಲೀನ್ ಎಂಟನೇ ಹೆನ್ರಿಯ ಎರಡನೇ ಹೆಂಡತಿ ಇದೇ ಜಾಗದಲ್ಲಿ ಕತ್ತು ಕುಯ್ಸಿಕೊಂಡಳು....1536 ನೇ ಇಸವಿ ಮೇ ಹತ್ತೊಂಬತ್ತನೇ ತಾರೀಖು ಅವಳ ಕತ್ತು ನೆಲಕ್ಕುರುಳಿದ್ದು...."

" ಇಬ್ಬರು ಹೆಂಡಿರನ್ನು ಆಗಬೇಕೇಕೆ-ಕಾಟ ತಡೆಯಲಾರದೆ ಕತ್ತು ಕತ್ತರಿಸ ಬೇಕೇಕೆ ? ಮರುಳ–ಪ್ರಶ್ನೆ.

" ರಾಣಿ ಕ್ಯಾಥರೀನ್ ಹೋವಾರ್ಡ್ ಅದೇ ಎಂಟನೇ ಹೆನ್ರಿಯ ಐದನೇ ಹೆಂಡ್ತಿಯ ಒಂದೇ ಕತ್ತನ್ನು ಇಲ್ಲೇ ಬಲಿ ಹುಯ್ದರು ಎಂದು ಗೊತ್ತೆ 1542ನೆ ಇಸವಿ ಫೆಬ್ರವರಿ ತಿಂಗಳು 13ನೇ ತಾರೀಖು...."

" ಶಿವಶಿವಾ....ಗುರುಗಳೇ ಎಂಟನೇ ಹೆನ್ರಿ ಅದಾಕ್ಷಣಕ್ಕೆ ಎಂಟು ಜನ ಹೆಂಡಿರನ್ನ ಕಟ್ಗೊಬೇಕೆ ? "

" ಮರುಳಾ–ಇಲ್ಲಿನ ಸಂಪ್ರದಾಯ ನಮಗೇಕೆ ನಾಲ್ಕನೇ ಜಾರ್ಜ ದೊರೆ ನಾಲ್ಕು ಹೆಂಡಿರನ್ನಾದನೆ ? "

" ಯಾರಿಗೆ ಗೊತ್ತು "

“ಇವನ್ನೆ ಕೇಳೋಣಂತೆ-ಕರಾರು ವಾಕ್ಯಾಗಿ ಇಂಥಾ ಇಸವೀಲಿ ಇಷ್ಟನೇ ಇಂಥವರನ್ನೇ ಹೀಗೇ ಕೊಂದರೂಂತ ಹೇಳ್ತಾ ಇದ್ದಾನಲ್ಲ ಈ ಮಾರ್ಗದರ್ಶಿ ಅವನ್ನೇ ಕೇಳೋಣ”

“ಯಾರು ಎಲ್ಲಾದರೂ ಎಷ್ಟು ಮಂದಿ ನ್ನಾರ ಕಟ್ಗೊಳ್ಳಿ ನಡೀರಿ ಗುರುಗಳೇ-ಈ ಕಗ್ಗೊಲೆಯ ಕೋಟೆ ನೋಡಿದ್ದು....ನಮ್ಮ ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರನ ಗುಡಿ ಇರೋ ಜಾಗದ ಹಾಗೇ ಇರೋ ಈ ಕೋಟೆಗೆ ಜಗತ್ತಿನಲ್ಲಿರೋರೆಲ್ಲಾ ‘ಟವರ್ ಆಫ್ ಲಂಡನ್’ ಅಂತ ಬಂದು ನೋಡೋದ್ರಲ್ಲಿ ಅರ್ಥವಿಲ್ಲ....ನಡೀರಿ ಗುರುಗಳೆ”-ಎಂದು. ಈ ಕೊಲೆ-ಸೆರೆಮನೆ-ಭರ್ಜಿ-ಈಟಿ ಈ ಶಾಂತಿಯುತ ಸನ್ಯಾಸಿಗಳ ತಂಡಕ್ಕೆ ಸರಿಹೊಂದಲಿಲ್ಲ. ತಲೆ ಚಟ್ಟು ಹಿಡಿದು ಹಸಿರು ಹುಲ್ಲು ಮೇಲೆ ಕೂತು ಬಿಟ್ಟರು. ಅಲ್ಲೇ ನಾಲ್ಕಾರು ಕಾಗೆಗಳು ಬಂದು ಕೂತು ಏನನ್ನೋ ಕುಕ್ಕಿ ತಿಂದವು. ದೊರ್ಸಾನಿ ಆ ಕಾಗೆಗಳನ್ನು ತೋರಿಸಿ—

“ಮೈಡಿಯರ್-ಈ ಕಾಣೆಗಳು ಈ ಕೋಟೆಗೆ ಶೋಭವಂತೆ-ಎಂದು ಈ ಕಾಗೆಗಳು ಇಲ್ಲಿಂದ ಹೋಗುವುವೊ ಅಂದು ಈ ಟವರ್ ಆಫ್ ಲಂಡನ್ ಬಿದ್ದು ಹೋಗುವುದಂತೆ....ಎಂಬ ಹಳೇ ಕಥೆಯುಂಟು....ಈ ಕಾಗೆಗಳ ಪೋಷಣಗೇ ವಿಶೇಷ ಸಿಬ್ಬಂದಿ ಉಂಟು-ಒಂದೊಂದು ಕಾಗೆಗೆ ವಾರಕ್ಕೆ ಎರಡು ಷಿಲಿಂಗ್ ನಾಲ್ಕು ಪೆನ್ನಿಯಂತೆ ಸಂಬಳ ಉಂಟು-ಆ ಸಂಬಳದಲ್ಲಿ ಕಾಗೆಗಳ ಆಳು ಕುದುರೆ ಮಾಂಸ ಇತ್ಯಾದಿ ಆಹಾರ ಅವುಗಳಿಗೊದಗಿಸುವ....ಇವುಗಳಿಗಾಗೇ ಲಾನ್‌ಥಾರನ್ ಬತೇರಿಯಲ್ಲಿ ವಿಶೇಷ ಪಂಜರಗಳೂ ಉಂಟು.”

“ಗುರುಗಳೇ ಈ ಕಾಗೆಗಳ ಮೋಜು ನೋಡಿದಿರಾ....ಮೂಢನಂಬಿಕೆ ಇಲ್ಲ ಇಲ್ಲಿನವರಿಗೆ ಅಂತೀರಲ್ಲಾ ನೋಡಿದಿರಾ....”–ಎಂದು ಕಾಗಕ್ಕನ ಅರ್ಚಿಕೆ ವಿಷಯ ಕೇಳಿದ ಮಂಕ ರಾಗ ಎಳೆದ.

“ಇಲ್ಲಿ ಹಳೇಕಾಲದಿಂದ ನಡೆದುಬಂದ ಮಾರುದ್ದ ಉಣ್ಣೆಟೋಪಿ ಶಿಪಾಯಿಗಳ ಕವಾತು-ಬೀಗದ ಕೈ ಬದಲಿಸುವ ಸಂಪ್ರದಾಯದ ಪದ್ಧತಿ ಇತ್ಯಾದಿ ಕಂದಾಚಾರದ ಹಳೇ ನಡಾವಳಿ ಇಂದು ನಡೆಯುತ್ತಿವೆ....”

“ದೊರ್ಸಾನಕ್ಕ ನಡೀರಿ ಮನೆಗೆ ಹೋಗೋಣ-ಡೊಣ್ಣೆ ಮೆಣಸಿನಕಾಯಿ ಹುಳಿ-ಖಾರವಾಗಿ ಮಾಡಿ ಬಡಸ್ತೀನಿ....ಸಾಕು ಈ ಕೋಟೆ ನೋಡಿದ್ದು”

—ಎಂದೆಂದು ಸುಸ್ತಾಗಿದ್ದ ಕಾಲೆಳೆದುಕೊಂಡು ಟವರ್ ಹಿಲ್ ನೆಲಮಾಳಿಗೆ ಸ್ಟೇಷನ್‌ಗೆ ಬಂದಾಗ ಮಧ್ಯಾಹ್ನ ಒಂದುಗಂಟೆಯಾಗಿತ್ತು. ಗಾಂಪರೊಡೆಯರು ಬಹಳ ಸುಸ್ತಾಗಿ ದೊರ್ಸಾನಿಯ ಹೆಗಲಮೇಲೆ ಆಸರೆ ಪಡೆದು ಮನೆಯ ಕಡೆ ಹಿಂದಿರುಗಿದರು.

—ದಾಶರಥಿ ದೀಕ್ಷಿತ್.



ಗಾಂಧಿನಗರ — — ಬೆಂಗಳೂರು-೯.

ಉತ್ತರ ಕರ್ನಾಟಕಕ್ಕೆ: ದಿನೇಶ್ ಫಿಲಂಸ್, ಸಟ್ವಾರ್ ಸ್ಟ್ರೀಟ್-ಹುಬ್ಬಳ್ಳಿ.

ಹೈದರಾಬಾದ್ ಪ್ರಾಂತ್ಯಕ್ಕೆ: ಜಯಶ್ರೀ ಫಿಲಂ ಎಕ್ಸ್‌ಚೇಂಜ್-ಗಾಂಧಿನಗರ-ಬೆಂಗಳೂರು-

ನಮ್ಮ ಸೋಲ್ ಏಜನ್ಸಿ ಪ್ರಕಟನೆಗಳು

— ಈಗ ಪ್ರಕಟವಾಗಿವೆ —

ನಾಡಿಗೇರ ಕೃಷ್ಣರಾಯರ ಕಾದಂಬರಿ

ರಾಣಿ ಮತ್ತೆ ಬರಲಿಲ್ಲ

208 ಪುಟಗಳು ಬೆಲೆ 2-00

★

ಮ. ತ್ರ್ಯಾರು ಕೃಷ್ಣಮೂರ್ತಿಯವರು ಅನುವಾದ ಮಾಡಿದ ಕಾದಂಬರಿ

ಡಾ|| ಅಖಿಲಾ

260 ಪುಟಗಳು ಬೆಲೆ 2-50

— ನಮ್ಮ ಇತರೆ ಪ್ರಕಟನೆಗಳು —

ಅ. ನ. ಕೃ. ರವರ ಹೊಸ ಕಾದಂಬರಿ

ಅದೃಷ್ಟ ನಕ್ಷತ್ರ

208 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಮನೆ ತುಂಬಿದ ಮಡದಿ

208 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಭಾಗ್ಯಸುಮಂಗಲಿ

204 ಪುಟಗಳು ಬೆಲೆ 2-00

ಮ. ನ. ಮೂರ್ತಿಗಳು ಬರೆದ ಕಾದಂಬರಿ

ಸಹಧರ್ಮಿಣಿ

204 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಮನೆಗೆ ಬಂದ ಸೊಸೆ

208 ಪುಟಗಳು ಬೆಲೆ 2-00

ಅ. ನ. ಕೃ. ರವರು ಬರೆದ ಕಾದಂಬರಿ

ಸುಂದರೂ ಸಂಸಾರ

252 ಪುಟಗಳು ಬೆಲೆ 2-25

ಸೂರ್ಯನಾರಾಯಣ ಚಡಗರವರ ಕಾದಂಬರಿ

ಬಂಗಾರಲಕ್ಷ್ಮಿ

208 ಪುಟಗಳು ಬೆಲೆ 2-00

ಕೃಷ್ಣಮೂರ್ತಿ ಪುರಾಣಿಕರ ಹೊಸ ಕಾದಂಬರಿ

ಹೊಸ ಹೆಂಡತಿ

190 ಪುಟಗಳು ಬೆಲೆ 2-00

ಪಿ. ಜಿ. ಕೃಷ್ಣಮೂರ್ತಿಯವರು ಬರೆದ ಐತಿಹಾಸಿಕ ಕಾದಂಬರಿ

ರಾಣಾ ಸಮರಸಿಂಹ

204 ಪುಟಗಳು ಬೆಲೆ 2-00

ದೀ Chi ಯವರ ಕಾದಂಬರಿ

TENT ಸಿನೇಮಾ

200 ಪುಟಗಳು ಬೆಲೆ 2 00

ಮ್ಯ. ಸು. ಶೇ. ರವರ ಕಾದಂಬರಿ

ಶುಭ ಸ್ವೀಕಾರ

200 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಅಮರ ಸರಸ್ವತಿ

208 ಪುಟಗಳು ಬೆಲೆ 2-00

ನಾಡಿಗೇರ ಕೃಷ್ಣರಾಯರ ಕಾದಂಬರಿ

ಇಬ್ಬರು ಸುಂದರಿಯರು

216 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಅರಶಿನ ಕುಂಕುಮ

208 ಪುಟಗಳು ಬೆಲೆ 2-00

ನಾಡಿಗೇರ ಕೃಷ್ಣರಾಯರ ಕಾದಂಬರಿ

ನಾಲ್ಕು ಸುಂದರಿಯರು

192 ಪುಟಗಳು ಬೆಲೆ 2-00

ಅ. ನ. ಕೃ. ರವರ ಕಾದಂಬರಿ

ಅಮೃತ ಮಂಥನ

216 ಪುಟಗಳು ಬೆಲೆ 2-00

ತ್ರಿವಿಕ್ರಮರವರ ಕಾದಂಬರಿ

ನಾಟ್ಯ ಕಸ್ತೂರಿ

208 ಪುಟಗಳು ಬೆಲೆ 2-00

ಕೃಷ್ಣಮೂರ್ತಿ ಪುರಾಣಿಕರವರ ಕಾದಂಬರಿ

ಅಣ್ಣನ ಹೆಂಡತಿ

208 ಪುಟಗಳು ಬೆಲೆ 2 00

ಮ. ನ. ಮೂರ್ತಿಯವರು ಬರೆದ ಕಾದಂಬರಿ

ಆರಾಧಿತೆ

200 ಪುಟಗಳು ಬೆಲೆ 2-00

ಮ. ಶ್ರೀಧರಮೂರ್ತಿಗಳು ಬರೆದ ಕಾದಂಬರಿ

ಸುವರ್ಣ ಮೋಹಿನಿ

200 ಪುಟಗಳು ಬೆಲೆ 2-00

ನಾಡಿಗೇರ ಕೃಷ್ಣರಾಯರ ಕಾದಂಬರಿ

ಪ್ರಣಯ ಕೋಲಾಹಲ

204 ಪುಟಗಳು ಬೆಲೆ 2 00

ಗೀತಾ ಏಜನ್ಸೀಸ್-ಸೌರಾಷ್ಟ್ರಪೇಟೆ, ಬೆಂಗಳೂರು-೨.

Printed by B. S. Iyengar, Bangalore City.
Publisher—B N. Gupta Editor—M. Sivaram